# ಸಹಕಾರೀ ಸಂಘಗಳ ಅಧಿನಿಯಮ, 1912

24.09.2001ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 21ನೇ ಸಂಪುಟದ 1ನೇ ಸಂಚಿಕೆಯಲ್ಲಿ 48 ರಿಂದ 60ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

ಪ್ರಕರಣಗಳ ಅನುಕ್ರಮಣಿಕೆ

**ಪ್ರಾರಂಭಿಕ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ನೋಂದಣಿ**

3. ರಿಜಿಸ್ಟ್ರಾರ್
4. ನೋಂದಾಯಿಸಬಹುದಾದ ಸಂಘಗಳು
5. ಪರಿಮಿತ ಹೊಣೆಗಾರಿಕೆ ಮತ್ತು ಷೇರು ಬಂಡವಾಳವಿರುವ ಸಂಘದ ಸದಸ್ಯನ ಹಿತಾಸಕ್ತಿಯ ಮೇಲೆ ಪರಿಬಂಧಗಳು
6. ನೋಂದಣಿಯ ಷರತ್ತುಗಳು
7. ಕೆಲವು ಪ್ರಶ್ನೆಗಳನ್ನು ತೀರ್ಮಾನಿಸಲು ರಿಜಿಸ್ಟ್ರಾರನ ಅಧಿಕಾರ
8. ನೋಂದಣಿಗಾಗಿ ಅರ್ಜಿ
9. ನೋಂದಣಿ
10. ನೋಂದಣಿಯ ಬಗ್ಗೆ ಸಾಕ್ಷ್ಯ
11. ನೋಂದಾಯಿತ ಸಂಘದ ಉಪವಿಧಿಗಳ ತಿದ್ದುಪಡಿ

**ಸದಸ್ಯರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**

12. ಸದಸ್ಯರು ಯುಕ್ತ ಸಂದಾಯ ಮಾಡುವವರೆಗೆ ಹಕ್ಕನ್ನು ಚಲಾಯಿಸಲಾಗದು
13. ಸದಸ್ಯರ ಮತಗಳು
14. ಷೇರು ಅಥವಾ ಹಿತಾಸಕ್ತಿಯ ವಗಾವಣೆಯ ಮೇಲೆ ಪರಿಬಂಧಗಳು

**ನೋಂದಾಯಿತ ಸಂಘಗಳ ಕರ್ತವ್ಯಗಳು**

15. ಸಂಘಗಳ ವಿಳಾಸ
16. ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಪ್ರತಿಗಳನ್ನು ಪರಿಶೀಲನೆಗೆ ಅವಕಾಶವಿರುವಂತೆ ಇಡುವುದು
17. ಲೆಕ್ಕ ಪರಿಶೋಧನೆ

**ನೋಂದಾಯಿತ ಸಂಘಗಳ ವಿಶೇಷಾಧಿಕಾರಿಗಳು**

18. ಸಂಘಗಳು ನಿಗಮಿತ ನಿಕಾಯಗಳಾಗಿರುವುದು
19. ಸಂಘವು ಮೊದಲ ಕ್ಲೇಮನ್ನು ಹೊಂದಿರುವುದು
20. ಸದಸ್ಯನ ಷೇರುಗಳು ಅಥವಾ ಹಿತಾಸಕ್ತಿಯ ಸಂಬಂಧದಲ್ಲಿ ಋಣಭಾರ ಮತ್ತು ವಜಾವಟ್ಟು
21. ಷೇರು ಅಥವಾ ಹಿತಾಸಕ್ತಿಯು ಜಪ್ತಿಗೆ ಗುರಿಯಾಗದಿರುವುದು
22. ಸದಸ್ಯರ ಮರಣದ ತರುವಾಯ ಹಿತಾಸಕ್ತಿಯ ವರ್ಗಾವಣೆ
23. ಮಾಜಿ ಸದಸ್ಯನ ಹೊಣೆಗಾರಿಕೆ
24. ಮೃತ ಸದಸ್ಯನ ಆಸ್ತಿಪಾಸ್ತಿಯ ಹೊಣೆಗಾರಿಕೆ
25. ಸದಸ್ಯರ ರಿಜಿಸ್ಟರು
26. ಸಂಘದ ಪುಸ್ತಕಗಳಲ್ಲಿನ ನಮೂದುಗಳ ರುಜುವಾತು

27. ನೋಂದಾಯಿತ ಸಂಘದ ಷೇರುಗಳಿಗೆ ಮತ್ತು ಡಿಬೆಂಚರುಗಳಿಗೆ ಸಂಬಂಧಿಸುವ ಲಿಖಿತಗಳಿಗೆ ಕಡ್ಡಾಯ ನೋಂದಣಿಯಿಂದ ವಿನಾಯಿತಿ
28. ಆದಾಯ ತೆರಿಗೆ, ಸ್ಟಾಂಪ್ ಶುಲ್ಕ ಮತ್ತು ನೋಂದಣಿ ಫೀಜುಗಳಿಂದ ವಿನಾಯಿತಿ ನೀಡುವ ಅಧಿಕಾರ

**ನೋಂದಾಯಿತ ಸಂಘಗಳ ಸ್ವತ್ತು ಮತ್ತು ನಿಧಿಗಳು**

29. ಸಾಲಗಳ ಮೇಲೆ ನಿರ್ಬಂಧ
30. ಸಾಲ ಪಡೆಯುವುದರ ಮೇಲೆ ನಿರ್ಬಂಧ
31. ಸದಸ್ಯರಲ್ಲದವರೊಂದಿಗೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ
32. ನಿಧಿಗಳ ಹೂಡಿಕೆ
33. ನಿಧಿಗಳನ್ನು ಲಾಭದ ರೂಪದಲ್ಲಿ ವಿಭಜಿಸದಿರುವುದು
34. ಧರ್ಮಾರ್ಥ ಉದ್ದೇಶಕ್ಕಾಗಿ ವಂತಿಗೆ

**ವ್ಯವಹಾರಗಳ ಪರಿಶೀಲನೆ**

35. ರಿಜಿಸ್ಟ್ರಾರನು ವಿಚಾರಣೆ ನಡೆಸುವುದು
36. ಋಣವಿರುವ ಸಂಘದ ಲೆಕ್ಕ ಪುಸ್ತಕಗಳ ಪರಿಶೀಲನೆ
37. ವಿಚಾರಣೆಯ ವೆಚ್ಚಗಳು
38. ವೆಚ್ಚಗಳ ವಸೂಲಿ

**ಸಂಘದ ವಿಸರ್ಜನೆ**

39. ವಿಸರ್ಜನೆ
40. ಸಂಘದ ನೋಂದಣಿಯ ರದ್ದಿಯಾತಿ
41. ನೋಂದಣಿಯ ರದ್ದಿಯಾತಿಯ ಪರಿಣಾಮ
42. ಸಮಾಪನಗೊಳಿಸುವುದು

**ನಿಯಮಗಳು**

43. ನಿಯಮಗಳು

**ಸಂಕೀರ್ಣ**

44. ಸರ್ಕಾರಕ್ಕೆ ಬರಬೇಕಾದ ಮೊತ್ತಗಳ ವಸೂಲಿ
45. ನೋಂದಣಿ ಷರತ್ತುಗಳಿಂದ ಸಂಘಗಳಿಗೆ ವಿನಾಯಿತಿ ನೀಡುವ ಅಧಿಕಾರ
46. ನೋಂದಾಯಿತ ಸಂಘಗಳಿಗೆ ಅಧಿನಿಯಮದ ಉಪಬಂಧಗಳಿಂದ ವಿನಾಯಿತಿ ನೀಡುವ ಅಧಿಕಾರ
47. "ಸಹಕಾರೀ" ಎಂಬ ಪದದ ಬಳಕೆಯ ನಿಷೇಧ
48. ಭಾರತೀಯ ಕಂಪನಿಗಳ ಅಧಿನಿಯಮ, 1882 ಅನ್ವಯಿಸದಿರುವುದು
49. ಅಸ್ತಿತ್ವದಲ್ಲಿರುವ ಸಂಘಗಳನ್ನು ಉಳಿಸುವುದು
50. [ನಿರಸನ]

## ಸಹಕಾರೀ ಸಂಘಗಳ ಅಧಿನಿಯಮ, 1912

(1912ರ ಅಧಿನಿಯಮ ಸಂಖ್ಯೆ 2)

[1ನೇ ಮಾರ್ಚ್ 1912]

ಸಹಕಾರೀ ಸಂಘಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಪರಿಮಿತ ಆದಾಯವುಳ್ಳ ಕೃಷಿಕರು, ಕುಶಲಕರ್ಮಿಗಳು ಮತ್ತು ವ್ಯಕ್ತಿಗಳಲ್ಲಿ ಮಿತವ್ಯಯ ಮತ್ತು ಸ್ವಸಹಾಯವನ್ನು ಉತ್ತೇಜನಗೊಳಿಸುವುದಕ್ಕಾಗಿ ಸಹಕಾರೀ ಸಂಘಗಳ ರಚನೆಯನ್ನು ಇನ್ನಷ್ಟು ಸುಲಭಗೊಳಿಸುವುದು ಮತ್ತು ಆ ಉದ್ದೇಶಕ್ಕಾಗಿ ಸಹಕಾರೀ ಸಂಘಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಸಹಕಾರೀ ಸಂಘಗಳ ಅಧಿನಿಯಮ, 1912 ಎಂದು ಕರೆಯತಕ್ಕದ್ದು; ಮತ್ತು

(2) ಇದು 1ನೇ ನವೆಂಬರ್, 1956ಕ್ಕೆ ನಿಕಟಪೂರ್ವದಲ್ಲಿ ‘ ಬಿ ’ ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದ ರಾಜ್ಯಕ್ಷೇತ್ರಗಳ ಹೊರತು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಎ) “ಉಪವಿಧಿಗಳು” ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ನೋಂದಾಯಿಸಿದ ಉಪವಿಧಿಗಳು ಮತ್ತು ಅದರಲ್ಲಿ ಉಪವಿಧಿಗಳ ನೋಂದಾಯಿತ ತಿದಿದುಪಡಿಯೂ ಸೇರುತ್ತದೆ;

(ಬಿ) “ಸಮಿತಿ” ಎಂದರೆ ನೋಂದಾಯಿತ ಸಂಘದ ವ್ಯವಹಾರಗಳ ನಿರ್ವಹಣೆಯನ್ನು ವಹಿಸಲಾಗಿರುವ ಆಡಳಿತ ಮಂಡಲಿ;

(ಸಿ) “ಸದಸ್ಯ” ಎಂಬುದು ಸಂಘದ ನೋಂದಣಿಯ ಅರ್ಜಿಯಲ್ಲಿ ಸೇರಿರುವ ವ್ಯಕ್ತಿಯನ್ನು ಮತ್ತು ನೋಂದಣಿಯ ತರುವಾಯ ಉಪವಿಧಿಗಳು ಮತ್ತು ಯಾವುವೇ ನಿಯಮಗಳಿಗನುಸಾರ ಸದಸ್ಯತ್ವವನ್ನು ಪಡೆದ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಡಿ) “ಅಧಿಕಾರಿ” ಎಂಬುದು ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಸದಸ್ಯ ಅಥವಾ ಸಂಘದ ವ್ಯವಹಾರಗಳ ಸಂಬಂಧದಲ್ಲಿ ನಿರ್ದೇಶನಗಳನ್ನು ನೀಡಲು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಧಿಕಾರ ಪಡೆದ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಇ) “ನೋಂದಾಯಿತ ಸಂಘ” ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿಸಲಾಗಿದೆಯೆಂದು ಭಾವಿಸಲಾದ ಸಂಘ;

(ಎಫ್) “ರಿಜಿಸ್ಟಾರ್” ಎಂದರೆ ಈಅಧಿನಿಯಮದ ಮೇರೆಗೆ ಸಹಕಾರೀ ಸಂಘಗಳ ರಿಜಿಸ್ಟ್ರಾರನ ಕರ್ತವ್ಯಗಳನ್ನು ನಿರ್ವಹಿಸಲು ನೇಮಕಗೊಂಡ ವ್ಯಕ್ತಿ;

(ಜಿ) “ನಿಯಮಗಳು” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು.

## ನೋಂದಣಿ

**3. ರಿಜಿಸ್ಟ್ರಾರ್.–** ರಾಜ್ಯ ಸರ್ಕಾರವು ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಸಹಕಾರೀ ಸಂಘಗಳ ರಿಜಿಸ್ಟ್ರಾರನೆಂದು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅಂಥ ರಿಜಿಸ್ಟ್ರಾರನಿಗೆ ನೆರವಾಗಲು ವ್ಯಕ್ತಿಗಳನ್ನು ನೇಮಕ ಮಾಡಬಹುದು, ಮತ್ತು ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಅಂಥ ಯಾರೇ ವ್ಯಕ್ತಿಗಳಿಗೆ ಈ ಅಧಿನಿಯಮದ ಮೇರೆಗಿನ ರಿಜಿಸ್ಟ್ರಾರನ ಎಲ್ಲ ಅಧಿಕಾರಗಳನ್ನು ಅಥವಾ ಯಾವುದೇ ಅಧಿಕಾರವನ್ನು ಪ್ರದಾನ ಮಾಡಬಹುದು.

**4. ನೋಂದಾಯಿಸಬಹುದಾದ ಸಂಘಗಳು.–** ಇದರಲ್ಲಿ ಇನ್ನು ಮುಂದೆ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಸಹಕಾರೀ ತತ್ವಗಳಿಗೆ ಅನುಸಾರವಾಗಿ ತನ್ನ ಸದಸ್ಯರ ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿರುವ ಸಂಘವನ್ನು ಅಥವಾ ಅಂಥ ಸಂಘದ ಕಾರ್ಯಾಚರಣೆಯನ್ನು ಸುಲಭಗೊಳಿಸುವ ಉದ್ದೇಶದಿಂದ ಸ್ಥಾಪಿತವಾಗಿರುವ ಸಂಘವನ್ನು, ಈ ಅಧಿನಿಯಮದ ಮೇರೆಗೆ ಪರಿಮಿತ ಹೊಣೆಗಾರಿಕೆಯೊಂದಿಗೆ ಅಥವಾ ಅದಿಲ್ಲದೆ ನೋಂದಾಯಿಸಬಹುದು:

ಪರಂತು, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸುವ ಹೊರತು,–

(1) ಯಾವ ಸಂಘಕ್ಕೆ ನೋಂದಾಯಿತ ಸಂಘವು ಸದಸ್ಯನಾಗಿರುವುದೋ ಆ ಸಂಘದ ಹೊಣೆಗಾರಿಕೆಯು ಪರಿಮಿತವಾಗಿರತಕ್ಕದ್ದು;

(2) ಯಾವ ಸಂಘವು ತನ್ನ ಸದಸ್ಯರಿಗೆ ಸಾಲವನ್ನು ನೀಡಲು ನಿಧಿಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿರುವುದೋ ಮತ್ತು ಯಾವ ಸಂಘದ ಸದಸ್ಯರಲ್ಲಿ ಹೆಚ್ಚು ಮಂದಿ ರೈತರೇ ಇರುವರೋ ಮತ್ತು ಯಾವ ಸಂಘಕ್ಕೆ ನೋಂದಾಯಿತ ಸಂಘವು ಸದಸ್ಯನಾಗಿಲ್ಲವೋ ಆ ಸಂಘದ ಹೊಣೆಗಾರಿಕೆಯು ಅಪರಿಮಿತವಾಗಿರತಕ್ಕದ್ದು.

**5. ಪರಿಮಿತ ಹೊಣೆಗಾರಿಕೆ ಮತ್ತು ಷೇರು ಬಂಡವಾಳವಿರುವ ಸಂಘದ ಸದಸ್ಯನ ಹಿತಾಸಕ್ತಿಯ ಮೇಲೆ ಪರಿಬಂಧಗಳು.–** ಸಂಘದ ಸದಸ್ಯರ ಹೊಣೆಗಾರಿಕೆಯು ಷೇರುಗಳ ಮೂಲಕ ಪರಿಮಿತವಾಗಿರುವಲ್ಲಿ, ನೋಂದಾಯಿತ ಸಂಘದ ಹೊರತು ಇತರ ಯಾವನೇ ಸದಸ್ಯನು,–

(ಎ) ಗರಿಷ್ಠ ಐದನೇ ಒಂದು ಭಾಗಕ್ಕೊಳಪಟ್ಟು, ಸಂಘದ ಷೇರು ಬಂಡವಾಳದ ಪೈಕಿ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಭಾಗಕ್ಕಿಂತ ಹೆಚ್ಚಿನ ಭಾಗವನ್ನು ಹೊಂದಿರತಕ್ಕದ್ದಲ್ಲ; ಅಥವಾ

(ಬಿ) ಒಂದು ಸಾವಿರ ರೂಪಾಯಿಗಳನ್ನು ಮೀರುವ ಸಂಘದ ಷೇರುಗಳಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರತಕ್ಕದ್ದಲ್ಲ ಅಥವಾ ಅದನ್ನು ಕ್ಲೇಮು ಮಾಡತಕ್ಕದ್ದಲ್ಲ.

**6. ನೋಂದಣಿಯ ಷರತ್ತುಗಳು.–** (1)ನೋಂದಾಯಿತ ಸಂಘವು ಸದಸ್ಯನಾಗಿರುವ ಸಂಘವಲ್ಲದ ಇತರ ಯಾವುದೇ ಸಂಘವನ್ನು, ಆ ಸಂಘವು 18 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ಕಡೇ ಪಕ್ಷ ಹತ್ತು ಜನರನ್ನು ಒಳಗೊಂಡಿಲ್ಲದಿದ್ದರೆ ಮತ್ತು ತನ್ನ ಸದಸ್ಯರಿಗೆ ಸಾಲ ನೀಡಲು ನಿಧಿಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದು ಆ ಸಂಘದ ಅಂಥ ವ್ಯಕ್ತಿಗಳು–

(ಎ) ಒಂದೇ ಪಟ್ಟಣ ಅಥವಾ ಗ್ರಾಮದಲ್ಲಿ ಅಥವಾ ಒಂದೇ ಗ್ರಾಮ ಸಮೂಹದಲ್ಲಿ ವಾಸ ಮಾಡುತ್ತಿರುವ ಹೊರತು; ಅಥವಾ

(ಬಿ) ರಿಜಿಸ್ಟ್ರಾರನು ಅನ್ಯಥಾ ನಿರ್ದೇಶಿಸುವ ಹೊರತು, ಒಂದೇ ಬುಡಕಟ್ಟಿನ, ಒಂದೇ ವರ್ಗದ, ಜಾತಿಯ ಅಥವಾ ವೃತ್ತಿಯ ಸದಸ್ಯರಾಗಿರುವ ಹೊರತು

– ಈ ಅಧಿನಿಯಮದ ಮೇರೆಗೆ ನೋಂದಾಯಿಸತಕ್ಕದ್ದಲ್ಲ.

(2) "ಪರಿಮಿತ" ಎಂಬ ಪದವು ಈ ಅಧಿನಿಯಮದ ಮೇರೆಗೆ ಪರಿಮಿತ ಹೊಣೆಗಾರಿಕೆಯೊಂದಿಗೆ ನೋಂದಾಯಿತವಾದ ಪ್ರತಿಯೊಂದು ಸಂಘದ ಹೆಸರಿನಲ್ಲಿ ಕೊನೆಯ ಪದವಾಗಿರತಕ್ಕದ್ದು.

**7. ಕೆಲವು ಪ್ರಶ್ನೆಗಳನ್ನು ತೀರ್ಮಾನಿಸಲು ರಿಜಿಸ್ಟ್ರಾರನ ಅಧಿಕಾರ.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಒಬ್ಬ ರೈತನೇ ಅಥವಾ ರೈತನಲ್ಲವೇ, ಅಥವಾ ಯಾವನೇ ವ್ಯಕ್ತಿಯು ಪಟ್ಟಣದ ಅಥವಾ ಗ್ರಾಮದ ಅಥವಾ ಗ್ರಾಮ ಸಮೂಹದ ನಿವಾಸಿಯೇ, ಅಥವಾ ಎರಡು ಅಥವಾ ಹೆಚ್ಚು ಗ್ರಾಮಗಳನ್ನು ಗ್ರಾಮ ಸಮೂಹವೆಂದು ಪರಿಗಣಿಸತಕ್ಕುದೇ ಅಥವಾ ಯಾವನೇ ವ್ಯಕ್ತಿಯು ಯಾವುದೇ ನಿರ್ದಿಷ್ಟ ಬುಡಕಟ್ಟಿಗೆ, ವರ್ಗಕ್ಕೆ, ಜಾತಿಗೆ ಅಥವಾ ವೃತ್ತಿಗೆ ಸೇರಿದವನೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದಾಗ, ಆ ಪ್ರಶ್ನೆಯನ್ನು ರಿಜಿಸ್ಟ್ರಾರನು ತೀರ್ಮಾನಿಸತಕ್ಕದ್ದು, ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**8. ನೋಂದಣಿಗಾಗಿ ಅರ್ಜಿ.–** (1) ನೋಂದಣಿಯ ಉದ್ದೇಶಗಳಿಗಾಗಿ ನೋಂದಣಿಯ ಅರ್ಜಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

(2) ಅರ್ಜಿಗೆ,–

(ಎ) ನೋಂದಾಯಿತ ಸಂಘವು, ಸದಸ್ಯನಾಗಿಲ್ಲದ ಸಂಘದ ಸಂದರ್ಭದಲ್ಲಿ 6ನೇ ಪ್ರಕರಣದ (1)ನೇ ಉಪ ಪ್ರಕರಣದ ಅಗತ್ಯಗಳಿಗನುಸಾರ ಅರ್ಹರಾದ ಕಡೇ ಪಕ್ಷ ಹತ್ತು ವ್ಯಕ್ತಿಗಳು; ಮತ್ತು

(ಬಿ) ನೋಂದಾಯಿತ ಸಂಘವು ಸದಸ್ಯನಾಗಿರುವ ಸಂಘದ ಸಂದರ್ಭದಲ್ಲಿ, ಅಂಥ ಪ್ರತಿಯೊಂದು ನೋಂದಾಯಿತ ಸಂಘದ ಪರವಾಗಿ ಕ್ರಮಬದ್ಧವಾಗಿ ಅಧಿಕೃತನಾದ ವ್ಯಕ್ತಿಯು ಮತ್ತು ಸಂಘಕ್ಕೆ, ಯಾವುವೇ ನೋಂದಾಯಿತ ಸಂಘಗಳು ಸದಸ್ಯರಾಗಿಲ್ಲದಿರುವಲ್ಲಿ ಹತ್ತು ಜನ ಇತರೆ ಸದಸ್ಯರು ಅಥವಾ ಇತರೆ ಸದಸ್ಯರು ಹತ್ತಕ್ಕಿಂತ ಕಡಿಮೆ ಇರುವಲ್ಲಿ ಅವರೆಲ್ಲರೂ

– ಸಹಿ ಮಾಡತಕ್ಕದ್ದು.

(3) ಅರ್ಜಿಗೆ ಸಂಘದ ಪ್ರಸ್ತಾವಿತ ಉಪವಿಧಿಗಳ ಪ್ರತಿಯನ್ನು ಲಗತ್ತಿಸಿರತಕ್ಕದ್ದು ಮತ್ತು ಯಾವ ವ್ಯಕ್ತಿಗಳು ಅಂಥ ಅರ್ಜಿಯನ್ನು ಸಲ್ಲಿಸಿರುವರೋ ಅಥವಾ ಯಾರ ಪರವಾಗಿ ಅಂಥ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ವ್ಯಕ್ತಿಗಳು ಸಂಘದ ಸಂಬಂಧದಲ್ಲಿ ರಿಜಿಸ್ಟ್ರಾರನು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

**9. ನೋಂದಣಿ.–** ಸಂಘವು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ನಿಯಮಗಳನ್ನು ಪಾಲಿಸಿದೆಯೆಂದು ಮತ್ತು ಅದರ ಪ್ರಸ್ತಾವಿತ ಉಪವಿಧಿಗಳು ಅಧಿನಿಯಮಕ್ಕೆ ಅಥವಾ ನಿಯಮಗಳಿಗೆ ವಿರುದ್ಧವಾಗಿಲ್ಲವೆಂದು ರಿಜಿಸ್ಟ್ರಾರನಿಗೆ ಮನದಟ್ಟಾಗಿ, ಅವನು ಯುಕ್ತವೆಂದು ಯೋಚಿಸಿದರೆ ಆ ಸಂಘವನ್ನು ಮತ್ತು ಅದರ ಉಪವಿಧಿಗಳನ್ನು ನೋಂದಾಯಿಸಬಹುದು.

**10. ನೋಂದಣಿಯ ಬಗ್ಗೆ ಸಾಕ್ಷ್ಯ.–** ರಿಜಿಸ್ಟ್ರಾರನು ಸಹಿ ಮಾಡಿದ ನೋಂದಣಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಘದ ನೋಂದಣಿಯನ್ನು ರದ್ದುಪಡಿಸಲಾಗಿದೆ ಎಂದು ರುಜುವಾತುಪಡಿಸಿದ ಹೊರತು, ಆ ಪ್ರಮಾಣ ಪತ್ರವು ಸಂಘವು ಕ್ರಮವಾಗಿ ನೋಂದಾಯಿತವಾಗಿದೆ ಎಂಬ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**11. ನೋಂದಾಯಿತ ಸಂಘದ ಉಪವಿಧಿಗಳ ತಿದ್ದುಪಡಿ.–** (1) ನೋಂದಾಯಿತ ಸಂಘದ ಉಪವಿಧಿಗಳ ಯಾವುದೇ ತಿದ್ದುಪಡಿಯನ್ನು ಈ ಅಧಿನಿಯಮದ ಮೇರೆಗೆ ನೋಂದಾಯಿಸುವವರೆಗೆ ಅದು ಸಿಂಧುವಾಗತಕ್ಕದ್ದಲ್ಲ ಮತ್ತು ಈ ಉದ್ದೇಶಕ್ಕಾಗಿ ತಿದ್ದುಪಡಿಯ ಪ್ರತಿಯನ್ನು ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(2) ರಿಜಿಸ್ಟ್ರಾರನು ಉಪವಿಧಿಗಳ ಯಾವುದೇ ತಿದ್ದುಪಡಿಯು ಈ ಅಧಿನಿಯಮಕ್ಕೆ ಅಥವಾ ನಿಯಮಗಳಿಗೆ ವಿರುದ್ಧವಾಗಿಲ್ಲವೆಂದು ಮನದಟ್ಟು ಮಾಡಿಕೊಂಡರೆ, ಮತ್ತು ಅವನು ಯುಕ್ತವೆಂದು ಯೋಚಿಸಿದರೆ ಆ ತಿದ್ದುಪಡಿಯನ್ನು ನೋಂದಾಯಿಸಬಹುದು.

(3) ರಿಜಿಸ್ಟ್ರಾರನು, ನೋಂದಾಯಿತ ಸಂಘಗಳ ಉಪವಿಧಿಗಳ ತಿದ್ದುಪಡಿಯನ್ನು ನೋಂದಾಯಿಸಿದಾಗ, ಅವನು ಪ್ರಮಾಣೀಕರಿಸಿದ ತಿದ್ದುಪಡಿಯ ಪ್ರತಿಯನ್ನು ಸಂಘಕ್ಕೆ ನೀಡತಕ್ಕದ್ದು, ಮತ್ತು ಆ ಪ್ರಮಾಣ ಪತ್ರವು, ತಿದ್ದುಪಡಿಯನ್ನು ಕ್ರಮವಾಗಿ ನೋಂದಾಯಿಸಲಾಗಿದೆ ಎಂಬ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು.

## ಸದಸ್ಯರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು

**12. ಸದಸ್ಯರು ಯುಕ್ತ ಸಂದಾಯ ಮಾಡುವವರೆಗೆ ಹಕ್ಕನ್ನು ಚಲಾಯಿಸಲಾಗದು.–** ನೋಂದಾಯಿತ ಸಂಘದ ಯಾವನೇ ಸದಸ್ಯನು ಸದಸ್ಯತ್ವದ ಸಂಬಂಧದಲ್ಲಿ ಸಂಘಕ್ಕೆ ನಿಯಮಗಳ ಅಥವಾ ಉಪವಿಧಿಗಳ ಮೂಲಕ ನಿಯಮಿಸಬಹುದಾದಂಥ ಮೊಬಲಗನ್ನು ಸಂದಾಯಮಾಡಿದ ಹೊರತು ಅಥವಾ ಮಾಡುವವರೆಗೆ ಅಥವಾ ಸಂಘದಲ್ಲಿ ಅಂಥ ಹಿತಾಸಕ್ತಿಯನ್ನು ಆರ್ಜಿಸಿದ ಹೊರತು ಅಥವಾ ಆರ್ಜಿಸುವವರೆಗೆ ಸದಸ್ಯನ ಹಕ್ಕುಗಳನ್ನು ಚಲಾಯಿಸತಕ್ಕದ್ದಲ್ಲ.

**13. ಸದಸ್ಯರ ಮತಗಳು.–** (1) ನೋಂದಾಯಿತ ಸಂಘದ ಸದಸ್ಯರ ಹೊಣೆಗಾರಿಕೆಯು ಷೇರುಗಳ ಮೂಲಕ ಪರಿಮಿತವಾಗಿಲ್ಲದಿರುವಲ್ಲಿ, ಪ್ರತಿಯೊಬ್ಬ ಸದಸ್ಯನು, ಬಂಡವಾಳದಲ್ಲಿ ತನ್ನ ಹಿತಾಸಕ್ತಿಯ ಮೊತ್ತವು ಏನೇ ಇದ್ದಾಗ್ಯೂ, ಅವನು ಸಂಘದ ವ್ಯವಹಾರಗಳಲ್ಲಿ ಸದಸ್ಯನಾಗಿ ಒಂದು ಮತವನ್ನು ಮಾತ್ರ ಹೊಂದಿರತಕ್ಕದ್ದು.

(2) ನೋಂದಾಯಿತ ಸಂಘದ ಸದಸ್ಯರ ಹೊಣೆಗಾರಿಕೆಯು ಷೇರುಗಳ ಮೂಲಕ ಪರಿಮಿತವಾಗಿರುವಲ್ಲಿ, ಪ್ರತಿಯೊಬ್ಬ ಸದಸ್ಯನು ಉಪವಿಧಿಗಳ ಮೂಲಕ ನಿಯಮಿಸಬಹುದಾದಷ್ಟು ಮತಗಳನ್ನು ಹೊಂದಿರತಕ್ಕದ್ದು.

(3) ಇತರ ಯಾವುದೇ ನೋಂದಾಯಿತ ಸಂಘದ ಷೇರುಗಳಲ್ಲಿ ತನ್ನ ನಿಧಿಗಳ ಯಾವುದೇ ಭಾಗವನ್ನು ಬಂಡವಾಳವಾಗಿ ಹೂಡಿರುವ ಒಂದು ನೋಂದಾಯಿತ ಸಂಘವು, ಅಂಥ ಇತರ ನೋಂದಾಯಿತ ಸಂಘದ ವ್ಯವಹಾರಗಳಲ್ಲಿ ಮತವನ್ನು ನೀಡುವ ಉದ್ದೇಶಕ್ಕಾಗಿ ತನ್ನ ಪ್ರತಿನಿಧಿಯಾಗಿ ತನ್ನ ಸದಸ್ಯರ ಪೈಕಿ ಯಾವನೇ ಒಬ್ಬನನ್ನು ನೇಮಕ ಮಾಡಬಹುದು.

**14. ಷೇರು ಅಥವಾ ಹಿತಾಸಕ್ತಿಯ ವಗಾವಣೆಯ ಮೇಲೆ ಪರಿಬಂಧಗಳು.–** (1) ನೋಂದಾಯಿತ ಸಂಘದ ಬಂಡವಾಳದಲ್ಲಿನ ಸದಸ್ಯನ ಷೇರಿನ ಅಥವಾ ಹಿತಾಸಕ್ತಿಯ ವರ್ಗಾವಣೆ ಅಥವಾ ಪ್ರಭಾರವು ಗರಿಷ್ಠ ಧಾರಣಕ್ಕೆ

ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೊಳ ಪಟ್ಟಿರತಕ್ಕದ್ದು.

(2) ಅಪರಿಮಿತ ಹೊಣೆಗಾರಿಯೊಂದಿಗೆ ನೋಂದಾಯಿತವಾದ ಸಂಘದ ಸಂದರ್ಭದಲ್ಲಿ, ಸದಸ್ಯನು ಸಂಘದ ಬಂಡವಾಳದಲ್ಲಿ ಅವನು ಹೊಂದಿರುವ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಅಥವಾ ಅದರ ಯಾವುದೇ ಭಾಗವನ್ನು –

(ಎ) ಅವನು ಅಂಥ ಷೇರು ಅಥವಾ ಹಿತಾಸಕ್ತಿಯನ್ನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ಹೊಂದಿದ್ದ ಹೊರತು; ಮತ್ತು

(ಬಿ) ಆ ವರ್ಗಾವಣೆ ಅಥವಾ ಪ್ರಭಾರವನ್ನು ಸಂಘಕ್ಕೆ ಅಥವಾ ಸಂಥದ ಸದಸ್ಯನಿಗೆ ಮಾಡಿದ ಹೊರತು

– ವರ್ಗಾವಣೆ ಮಾಡತಕ್ಕದ್ದಲ್ಲ.

**ನೋಂದಾಯಿತ ಸಂಘಗಳ ಕರ್ತವ್ಯಗಳು**

**15. ಸಂಘಗಳ ವಿಳಾಸ.–** ಪ್ರತಿಯೊಂದು ನೋಂದಾಯಿತ ಸಂಘವು ನಿಯಮಗಳಿಗನುಸಾರವಾಗಿ ನೋಂದಾಯಿಸಿದ ಒಂದು ವಿಳಾಸವನ್ನು ಹೊಂದಿರತಕ್ಕದ್ದು. ಆ ವಿಳಾಸಕ್ಕೆ ಎಲ್ಲ ನೋಟೀಸುಗಳು ಮತ್ತು ಪತ್ರಗಳನ್ನು ಕಳುಹಿಸಬಹುದು ಮತ್ತು ವಿಳಾಸದಲ್ಲಿ ಉಂಟಾಗುವ ಅದರ ಪ್ರತಿಯೊಂದು ಬದಲಾವಣೆಯ ಬಗ್ಗೆ ರಿಜಿಸ್ಟ್ರಾರನಿಗೆ ತಿಳಿಸತಕ್ಕದ್ದು.

**16. ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಪ್ರತಿಗಳನ್ನು ಪರಿಶೀಲನೆಗೆ ಅವಕಾಶವಿರುವಂತೆ ಇಡುವುದು.–** ಪ್ರತಿಯೊಂದು ನೋಂದಾಯಿತ ಸಂಘವು ಈ ಅಧಿನಿಯಮದ ಮತ್ತು ಅಂಥ ಸಂಘದ ಆಡಳಿತ ನಿಯಮಗಳ ಮತ್ತು ಅದರ ಉಪವಿಧಿಗಳ ಪ್ರತಿಗಳನ್ನು ಸಂಘದ ನೋಂದಾಯಿತ ವಿಳಾಸದ ಸ್ಥಳದಲ್ಲಿ ಎಲ್ಲ ಯುಕ್ತ ವೇಳೆಗಳಲ್ಲಿ ಉಚಿತವಾಗಿ ಪರಿಶೀಲಿಸಲು ಅವಕಾಶವಿರುವಂತೆ ಇಟ್ಟಿರತಕ್ಕದ್ದು.

**17. ಲೆಕ್ಕ ಪರಿಶೋಧನೆ.–** (1) ರಿಜಿಸ್ಟ್ರಾರನು, ಪ್ರತಿಯೊಂದು ನೋಂದಾಯಿತ ಸಂಘದ ಲೆಕ್ಕಪತ್ರಗಳನ್ನು ಕಡೇಪಕ್ಷ ವರ್ಷಕ್ಕೊಮ್ಮೆ ಲೆಕ್ಕಪರಿಶೋಧನೆ ಮಾಡತಕ್ಕದ್ದು ಅಥವಾ ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ ತಾನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯ ಮೂಲಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಲೆಕ್ಕ ಪರಿಶೋಧನೆಯು, ಅವಧಿ ಮೀರಿದ ಸಾಲಗಳು, ಯಾವುವಾದರೂ ಇದ್ದರೆ ಅವುಗಳ ಪರಿಶೀಲನೆಯನ್ನು ಮತ್ತು ಸಂಘದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಮೌಲ್ಯ ನಿರ್ಧಾರವನ್ನು ಒಳಗೊಳ್ಳತಕ್ಕದ್ದು.

(3) ರಿಜಿಸ್ಟ್ರಾರ್, ಕಲೆಕ್ಟರ್ ಅಥವಾ ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ ರಿಜಿಸ್ಟ್ರಾರನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ, ಎಲ್ಲ ಕಾಲಗಳಲ್ಲಿ ಸಂಘದ ಎಲ್ಲ ಪುಸ್ತಕಗಳು, ಲೆಕ್ಕಪತ್ರಗಳು, ಕಾಗದಪತ್ರಗಳು ಮತ್ತು ಭದ್ರತಾ ಪತ್ರಗಳನ್ನು ಪರಿಶೀಲಿಸುವ ಅವಕಾಶವಿರತಕ್ಕದ್ದು ಮತ್ತು ಸಂಘದ ಪ್ರತಿಯೊಬ್ಬ

ಅಧಿಕಾರಿಯು, ಸಂಘದ ವ್ಯವಹಾರಗಳು ಮತ್ತು ಕಾರ್ಯಕಲಾಪಗಳ ಸಂಬಂಧದಲ್ಲಿ ಅಂಥ ಪರಿಶೀಲನೆಯನ್ನು ಮಾಡುವ ವ್ಯಕ್ತಿಯು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

**ನೋಂದಾಯಿತ ಸಂಘಗಳ ವಿಶೇಷಾಧಿಕಾರಿಗಳು**

**18. ಸಂಘಗಳು ನಿಗಮಿತ ನಿಕಾಯಗಳಾಗಿರುವುದು.–** ಸಂಘದ ನೋಂದಣಿಯ ಪರಿಣಾಮವಾಗಿ ಆ ಸಂಘವು, ಅದನ್ನು ಯಾವ ಹೆಸರಿನಿಂದ ನೋಂದಾಯಿಸಲಾಗಿದೆಯೋ ಆ ಹೆಸರಿನಲ್ಲಿ ನಿಗಮಿತ ನಿಕಾಯವಾಗತಕ್ಕುದು ಮತ್ತು ಅದು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಮತ್ತು ಸ್ವತ್ತನ್ನು ಹೊಂದುವ, ಕರಾರುಗಳನ್ನು ಮಾಡಿಕೊಳ್ಳುವ, ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಮತ್ತು ಪ್ರತಿರಕ್ಷಿಸುವ ಮತ್ತು ಅದರ ರಚನೆಯ ಉದ್ದೇಶಗಳಿಗಾಗಿ ಅವಶ್ಯಕವಾದ ಎಲ್ಲ ಕಾರ್ಯಗಳನ್ನು ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

**19. ಸಂಘವು ಮೊದಲ ಕ್ಲೇಮನ್ನು ಹೊಂದಿರುವುದು.–** ಭೂ ಕಂದಾಯ ಅಥವಾ ಭೂ ಕಂದಾಯದಂತೆ ವಸೂಲು ಮಾಡಬಹುದಾದ ಯಾವುದೇ ಹಣದ ಸಂಬಂಧದಲ್ಲಿ ಸರ್ಕಾರದ ಅಥವಾ ಬಾಡಿಗೆ ಅಥವಾ ಬಾಡಿಗೆಯಂತೆ ವಸೂಲು ಮಾಡಬಹುದಾದ ಯಾವುದೇ ಹಣದ ಸಂಬಂಧದಲ್ಲಿ ಭೂ ಒಡೆಯನ ಯಾವುದೇ ಮೊದಲ ಕ್ಲೇಮಿಗೊಳಪಟ್ಟು ನೋಂದಾಯಿತ ಸಂಘಕ್ಕೆ ಸದಸ್ಯನಿಂದ ಅಥವಾ ಮಾಹಿ ಸದಸ್ಯನಿಂದ ಬರತಕ್ಕ ಬಾಕಿಗಳ ಸಂಬಂಧದಲ್ಲಿನ ಯಾವುದೇ ತಗಾದೆಯನ್ನು –

(ಎ) ಬಿತ್ತನೆ ಬೀಜ ಅಥವಾ ಗೊಬ್ಬರದ ಪೂರೈಕೆ ಅಥವಾ ಬಿತ್ತನೆ ಬೀಜ ಅಥವಾ ಗೊಬ್ಬರವನ್ನು ಕೊಳ್ಳುವುದಕ್ಕಾಗಿ ಕೊಡುವ ಹಣದ ಸಾಲದ ಸಂಬಂಧದಲ್ಲಿ ಅಂಥ ಪೂರೈಕೆ ಅಥವಾ ಸಾಲದ ದಿನಾಂಕದಿಂದ ಹದಿನೆಂಟು ತಿಂಗಳುಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಸದಸ್ಯ ಅಥವಾ ವ್ಯಕ್ತಿಯ ಬೆಳೆಗಳು ಅಥವಾ ಇತರ ಕೃಷಿ ಉತ್ಪನ್ನಗಳ ಮೇಲೆ;

(ಬಿ) ಜಾನುವಾರುಗಳು, ಜಾನುವಾರು ಮೇವು, ಕೃಷಿ ಅಥವಾ ಕೈಗಾರಿಕಾ ಉಪಕರಣಗಳು ಅಥವಾ ಯಂತ್ರೋಪಕರಣಗಳು, ಅಥವಾ ತಯಾರಿಕೆಗಾಗಿ ಕಚ್ಚಾ ಸಾಮಗ್ರಿಗಳು, ಅಥವಾ ಮೇಲೆ ಹೇಳಿದ ಯಾವುವೇ ವಸ್ತುಗಳನ್ನು ಕೊಳ್ಳುವುದಕ್ಕಾಗಿ ಒದಗಿಸಿದ ಹಣದ ಸಾಲದ ಪೂರೈಕೆಯ ಸಂಬಂಧದಲ್ಲಿ ಹಾಗೆ ಪೂರೈಸಿದ ಅಥವಾ ಯಾವುದೇ ಅಂಥ ಸಾಲದಿಂದ ಪೂರ್ಣವಾಗಿ ಅಥವಾ ಭಾಗಶ: ಖರೀದಿಸಿದ ಯಾವುವೇ ಅಂಥ ವಸ್ತುಗಳ ಮೇಲೆ ಅಥವಾ ಹಾಗೆ ಪೂರೈಸಿದ ಅಥವಾ ಖರೀದಿಸಿದ ಕಚ್ಚಾ ಸಾಮಗ್ರಿಗಳಿಂದ ತಯಾರಿಸಿದ ಯಾವುವೇ ವಸ್ತುಗಳ ಮೇಲೆ, ಇತರ ಸಾಲಿಗರಿಗಿಂತ ಮುಂಚಿತವಾಗಿ ಒತ್ತಾಯಪಡಿಸಲು ಸಂಘವು ಹಕ್ಕುಳ್ಳದ್ದಾಗಿರತಕ್ಕದ್ದು.

**20. ಸದಸ್ಯನ ಷೇರುಗಳು ಅಥವಾ ಹಿತಾಸಕ್ತಿಯ ಸಂಬಂಧದಲ್ಲಿ ಋಣಭಾರ ಮತ್ತು ವಜಾವಟ್ಟು.–** ಒಂದು ನೋಂದಾಯಿತ ಸಂಘವು ತನ್ನ ಸದಸ್ಯನಿಂದ ಅಥವಾ ಮಾಜಿ ಸದಸ್ಯನಿಂದ ಸಂಘಕ್ಕೆ ಬರಬೇಕಾದ ಯಾವುದೇ ಸಾಲದ ಸಂಬಂಧದಲ್ಲಿ ಅಂಥ ಸದಸ್ಯನ ಅಥವಾ ಮಾಜಿ ಸದಸ್ಯನ ಬಂಡವಾಳದ ಷೇರಿನ ಅಥವಾ ಹಿತಾಸಕ್ತಿಯ ಮೇಲೆ ಮತ್ತು ಠೇವಣಿಗಳ ಮೇಲೆ ಮತ್ತು ಸದಸ್ಯನಿಗೆ ಅಥವಾ ಮಾಜಿ ಸದಸ್ಯನಿಗೆ ಸಂದಾಯ ಮಾಡಬೇಕಾದ

ಯಾವುದೇ ಲಾಭಾಂಶ, ಬೋನಸ್ ಅಥವಾ ಲಾಭಗಳ ಮೇಲೆ ಪ್ರಭಾರವನ್ನು ಹೊಂದಿರತಕ್ಕದ್ದು ಮತ್ತು ಸಂಘವು ಅಂಥ ಯಾವುದೇ ಸಾಲದ ಸಂದಾಯದ ಸಂಬಂಧದಲ್ಲಿ ಸದಸ್ಯನ ಅಥವಾ ಮಾಜಿ ಸದಸ್ಯನ ಲೆಕ್ಕಕ್ಕೆ ಜಮೆ ಮಾಡಿದ ಅಥವಾ ಅವನಿಗೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ವಜಾವಟ್ಟು ಮಾಡಬಹುದು.

**21. ಷೇರು ಅಥವಾ ಹಿತಾಸಕ್ತಿಯು ಜಪ್ತಿಗೆ ಗುರಿಯಾಗದಿರುವುದು.–** 20ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ನೋಂದಾಯಿತ ಸಂಘದ ಬಂಡವಾಳದಲ್ಲಿ ಸದಸ್ಯನು ಹೊಂದಿರುವ ಷೇರು ಅಥವಾ ಹಿತಾಸಕ್ತಿಯು ಅಂಥ ಸದಸ್ಯನು ವಹಿಸಿದ ಯಾವುದೇ ಋಣ ಅಥವಾ ಹೊಣೆಗಾರಿಕೆಯ ಸಂಬಂಧದಲ್ಲಿ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗೆ ಜಪ್ತಿಗೆ ಅಥವಾ ಮಾರಾಟಕ್ಕೆ ಗುರಿಯಾಗತಕ್ಕದ್ದಲ್ಲ ಮತ್ತು ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿತನ ಅಧಿನಿಯಮ, 1909 (1909ರ 3) ರ ಮೇರೆಗೆ ಅಧಿಕೃತ ಹಸ್ತಾಂತರಣ ಪಡೆದವನು, ಅಥವಾ ಪ್ರಾಂತೀಯ ದಿವಾಳಿತನ ಅಧಿನಿಯಮ, 1907 (1907ರ 3)ರ ಮೇರೆಗೆ ರಿಸೀವರನು ಅಂಥ ಷೇರು ಅಥವಾ ಹಿತಾಸಕ್ತಿಯ ಮೇಲೆ ಯಾವುದೇ ಕ್ಲೇಮಿಗೆ ಹಕ್ಕುಳ್ಳವನಾಗಿರತಕ್ಕುದಲ್ಲ ಅಥವಾ ಕ್ಲೇಮನ್ನು ಹೊಂದಿರತಕ್ಕದ್ದಲ್ಲ.

**22. ಸದಸ್ಯರ ಮರಣದ ತರುವಾಯ ಹಿತಾಸಕ್ತಿಯ ವರ್ಗಾವಣೆ.–** (1) ಸದಸ್ಯನ ಮರಣದ ತರುವಾಯ ನೋಂದಾಯಿತ ಸಂಘವು, ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯನ್ನು ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ನಾಮನಿರ್ದೇಶನ ಮಾಡಿದ ವ್ಯಕ್ತಿಗೆ ಅಥವಾ ಹಾಗೆ ನಾಮ ನಿರ್ದೇಶನ ಮಾಡಿದ ವ್ಯಕ್ತಿಯು ಇರದಿದ್ದರೆ, ಮೃತ ಸದಸ್ಯರ ವಾರಸುದಾರ ಅಥವಾ ಕಾನೂನು ಪ್ರತಿನಿಧಿ ಎಂದು ಸಮಿತಿಗೆ ಕಂಡು ಬರಬಹುದಾದಂಥ ವ್ಯಕ್ತಿಗೆ ವರ್ಗಾವಣೆ ಮಾಡಬಹುದು ಅಥವಾ ನಿಯಮಗಳು ಅಥವಾ ಉಪವಿಧಿಗಳ ಅನುಸಾರವಾಗಿ ಖಚಿತಪಡಿಸಿಕೊಳ್ಳಲಾದಂತೆ ಅಂಥ ಸದಸ್ಯನ ಷೇರು ಅಥವಾ ಹಿತಾಸಕ್ತಿಯ ಮೌಲ್ಯವನ್ನು ತೋರಿಸುವ ಮೊತ್ತವನ್ನು ಸಂದರ್ಭಾನುಸಾರ ಅಂಥ ನಾಮನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಗೆ ಸಂದಾಯ ಮಾಡಬಹುದು:

ಪರಂತು,–

(i) ಅಪರಿಮಿತ ಹೊಣೆಗಾರಿಕೆಯ ಸಂಘದ ಸಂದರ್ಭದಲ್ಲಿ, ಸಂದರ್ಭಾನುಸಾರ ಅಂಥ ನಾಮ ನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯು ಮೇಲೆ ಹೇಳಿದಂತೆ ಖಚಿತಪಡಿಸಿಕೊಳ್ಳಲಾದ ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯ ಮೌಲ್ಯವನ್ನು ಸಂಘವು ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು;

(ii) ಪರಿಮಿತ ಹೊಣೆಗಾರಿಕೆಯ ಸಂಘದ ಸಂದರ್ಭದಲ್ಲಿ, ಸಂಘವು ಮೃತ ಸದಸ್ಯನ ಷೇರು ಅಥವಾ ಹಿತಾಸಕ್ತಿಯನ್ನು ಸಂದರ್ಭಾನುಸಾರ, ಸಂಘದ ಸದಸ್ಯತ್ವ ಪಡೆಯಲು ನಿಯಮಗಳು ಮತ್ತು ಉಪವಿಧಿಗಳ ಅನುಸಾರ ಅರ್ಹನಾದಂಥ ನಾಮನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಗೆ ಅಥವಾ ಆ ಸದಸ್ಯನು ಮರಣ ಹೊಂದಿದ ಒಂದು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಹಾಗೆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಅರ್ಹನಾಗಿರುವ ಯಾವನೇ ವ್ಯಕ್ತಿಗೆ, ವರ್ಗಾವಣೆ ಮಾಡತಕ್ಕದ್ದು.

(2) ನೋಂದಾಯಿತ ಸಂಘವು, ಮೃತನಾದ ಸದಸ್ಯನಿಗೆ ಸಂಘದಿಂದ ಬರಬೇಕಾದ ಎಲ್ಲ ಇತರ ಹಣವನ್ನು, ಸಂದರ್ಭಾನುಸಾರ ಅಂಥ ನಾಮ ನಿರ್ದೇಶಿತನಿಗೆ, ವಾರಸುದಾರನಿಗೆ ಅಥವಾ ಕಾನೂನು ಪ್ರತಿನಿಧಿಗೆ ಸಂದಾಯ ಮಾಡಬಹುದು.

(3) ಈ ಪ್ರಕರಣದ ಉಪಬಂಧಗಳಿಗನುಸಾರ ನೋಂದಾಯಿತ ಸಂಘವು ಮಾಡಿದ ಎಲ್ಲ ವರ್ಗಾವಣೆಗಳು ಮತ್ತು ಸಂದಾಯಗಳು ಯಾವನೇ ಇತರ ವ್ಯಕ್ತಿಯು ಸಂಘಕ್ಕೆ ಮಾಡಿದ ಯಾವುದೇ ತಗಾದೆಯ ಸಂಬಂಧದಲ್ಲಿ ಸಿಂಧುವಾಗತಕ್ಕದ್ದು ಮತ್ತು ಪರಿಣಾಮಕಾರಿಯಾಗತಕ್ಕದ್ದು.

**23. ಮಾಜಿ ಸದಸ್ಯನ ಹೊಣೆಗಾರಿಕೆ.–** ನೋಂದಾಯಿತ ಸಂಘದ ಋಣಗಳ ಸಂಬಂಧದಲ್ಲಿ ಮಾಜಿ ಸದಸ್ಯನು ಸದಸ್ಯನಾಗಿರುವುದು ನಿಂತು ಹೋದಾಗ ಅಸ್ತಿತ್ವದಲ್ಲಿದ್ದ ಅವನ ಹೊಣೆಗಾರಿಕೆಯು ಅವನ ಸದಸ್ಯನಾಗಿರುವುದು ನಿಂತು ಹೋದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಮುಂದುವರೆಯತಕ್ಕದ್ದು.

**24. ಮೃತ ಸದಸ್ಯನ ಆಸ್ತಿಪಾಸ್ತಿಯ ಹೊಣೆಗಾರಿಕೆ.–** ಸದಸ್ಯನು ಮರಣ ಹೊಂದಿದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನೋಂದಾಯಿತ ಸಂಘದ ಋಣಗಳ ಸಂಬಂಧದಲ್ಲಿ ಅವನ ಆಸ್ತಿಪಾಸ್ತಿಯು ಅವನ ಮರಣದ ಕಾಲದಿಂದ ಒಂದು ವರ್ಷದ ಅವಧಿಯವರೆಗೆ ಹೊಣೆಯಾಗಿರತಕ್ಕದು.

**25. ಸದಸ್ಯರ ರಿಜಿಸ್ಟರು.–** ಯಾವುದೇ ನೋಂದಾಯಿತ ಸಂಘವು ಇಟ್ಟಿರುವ ಸದಸ್ಯರ ಅಥವಾ ಷೇರುಗಳ ಯಾವುದೇ ರಿಜಿಸ್ಟರ್ ಅಥವಾ ಪಟ್ಟಿಯು, ಅದರಲ್ಲಿ ನಮೂದಿಸಿರುವ ಈ ಮುಂದಿನ ಯಾವುದೇ ವಿವರಗಳ ಬಗ್ಗೆ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು, ಎಂದರೆ:–

(ಎ) ಯಾವನೇ ವ್ಯಕ್ತಿಯ ಹೆಸರನ್ನು ಸದಸ್ಯನಾಗಿ ಅಂಥ ರಿಜಿಸ್ಟರು ಅಥವಾ ಪಟ್ಟಿಯಲ್ಲಿ ನಮೂದಿಸಲಾದ ದಿನಾಂಕ;

(ಬಿ) ಯಾವನೇ ಅಂಥ ವ್ಯಕ್ತಿಯು ಸದಸ್ಯನಾಗಿರುವುದು ನಿಂತುಹೋದ ದಿನಾಂಕ;

**26. ಸಂಘದ ಪುಸ್ತಕಗಳಲ್ಲಿನ ನಮೂದುಗಳ ರುಜುವಾತು.–** ವ್ಯವಹಾರದ ಕ್ರಮದಲ್ಲಿ ಕ್ರಮಾನುಗತವಾಗಿ ಇಟ್ಟುಕೊಂಡು ಬಂದಿರುವ ಒಂದು ನೋಂದಾಯಿತ ಸಂಘದ ಪುಸ್ತಕದಲ್ಲಿನ ಯಾವುದೇ ನಮೂದಿನ ಒಂದು ಪ್ರತಿಯನ್ನು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಮಾಣೀಕರಿಸಿದರೆ, ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಗಳಲ್ಲಿ ಅಂಥ ನಮೂದು ಇರುವ ಬಗ್ಗೆ ಮೊದಲ ನೋಟದಲ್ಲಿ ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು ಮತ್ತು ಮೂಲ ನಮೂದೇ ಅಂಗೀಕಾರಾರ್ಹವಾಗಿರುವ ಸಂದರ್ಭದಲ್ಲಿ ಮತ್ತು ಅಷ್ಟರಮಟ್ಟಿಗೆ ಅದರಲ್ಲಿ ದಾಖಲು ಮಾಡಲಾಗಿರುವ ವಿಷಯಗಳು, ವಹಿವಾಟುಗಳು ಮತ್ತು ಲೆಕ್ಕಪತ್ರಗಳ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

**27. ನೋಂದಾಯಿತ ಸಂಘದ ಷೇರುಗಳಿಗೆ ಮತ್ತು ಡಿಬೆಂಚರುಗಳಿಗೆ ಸಂಬಂಧಿಸುವ ಲಿಖಿತಗಳಿಗೆ ಕಡ್ಡಾಯ ನೋಂದಣಿಯಿಂದ ವಿನಾಯಿತಿ.–** ಭಾರತ ನೋಂದಣಿ ಅಧಿನಿಯಮ, 1908 (1908ರ 16)ರ 17ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡಗಳಲ್ಲಿ ಇರುವುದು ಯಾವುದೂ,–

(1) ಒಂದು ನೋಂದಾಯಿತ ಸಂಘದ ಆಸ್ತಿಗಳು ಪೂರ್ಣವಾಗಿ ಅಥವಾ ಭಾಗಶಃ ಸ್ಥಿರಾಸ್ತಿಯನ್ನು ಒಳಗೊಂಡಿದ್ದರೂ, ಅಂಥ ಸಂಘದಲ್ಲಿನ ಷೇರುಗಳಿಗೆ ಸಂಬಂಧಿಸುವ ಯಾವುದೇ ಲಿಖಿತಕ್ಕೆ; ಅಥವಾ

(2) ಅಂಥ ಯಾವುದೇ ಸಂಘವು ಹೊರಡಿಸಿದ ಮತ್ತು ಸ್ಥಿರಾಸ್ತಿಗೆ ಅಥವಾ ಅದರಲ್ಲಿ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಸೃಷ್ಟಿಸದಿರುವ, ಘೋಷಿಸದಿರುವ, ಹಸ್ತಾಂತರಣ ಮಾಡದಿರುವ ಅಥವಾ ಅಂತ್ಯಗೊಳಿಸದಿರುವ ಯಾವ ಡಿಬೆಂಚರಿನ ಧಾರಕನಿಗೆ, ಯಾವ ನೋಂದಾಯಿತ ಲಿಖಿತದ ಮೂಲಕ ಸಂಘವು ಅಂಥ ಡಿಬೆಂಚರುಗಳ ಧಾರಕರ ಪ್ರಯೋಜನಕ್ಕಾಗಿ ನ್ಯಾಸದ ಮೇಲೆ ನ್ಯಾಸಧಾರಿಗಳಿಗೆ ತನ್ನ ಸ್ಥಿರಾಸ್ತಿಯನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಅಡಮಾನಮಾಡಿದೆಯೋ, ಹಸ್ತಾಂತರಿಸಿದೆಯೋ ಅಥವಾ ಅನ್ಯಥಾ ವರ್ಗಾಯಿಸಿದೆಯೋ ಆ ನೋಂದಾಯಿತ ಲಿಖಿತದ ಮೂಲಕ ನೀಡಲಾಗುವ ಭದ್ರತೆಗೆ ಹಕ್ಕು ಒದಗಿಸುವಷ್ಟರ ಮಟ್ಟಿಗೆ ಹೊರತು, ಆ ಯಾವುದೇ ಡಿಬೆಂಚರಿಗೆ; ಅಥವಾ

(3) ಯಾವುದೇ ಅಂಥ ಸಂಘವು ಹೊರಡಿಸಿದ ಯಾವುದೇ ಡಿಬೆಂಚರ್ ಮೇಲಿನ ಯಾವುದೇ ಹಿಂಬರಹಕ್ಕೆ ಅಥವಾ ಆ ಡಿಬೆಂಚರಿನ ವರ್ಗಾವಣೆಗೆ

– ಅನ್ವಯವಾಗತಕ್ಕದ್ದಲ್ಲ.

**28. ಆದಾಯ ತೆರಿಗೆ, ಸ್ಟಾಂಪ್ ಶುಲ್ಕ ಮತ್ತು ನೋಂದಣಿ ಫೀಜುಗಳಿಂದ ವಿನಾಯಿತಿ ನೀಡುವ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಯಾವುದೇ ನೋಂದಾಯಿತ ಸಂಘ ಅಥವಾ ನೋಂದಾಯಿತ ಸಂಘಗಳ ಯಾವುದೇ ವರ್ಗದ ಸಂದರ್ಭದಲ್ಲಿ, ಸಂಘದ ಲಾಭಗಳ ಸಂಬಂಧದಲ್ಲಿ ಅಥವಾ ಲಾಭಗಳ ಕಾರಣದಿಂದ ಸಂಘದ ಸದಸ್ಯರು ಸ್ವೀಕರಿಸಿದ ಲಾಭಾಂಶಗಳ ಅಥವಾ ಇತರ ಸಂದಾಯಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಆದಾಯ ತೆರಿಗೆಗಳನ್ನು ಮಾಫೀ ಮಾಡಬಹುದು.

(2) ಸರ್ಕಾರವು, ರಾಜಪತ್ರದ್ಲಲಿ ಅಧಿಸೂಚನೆ ಮೂಲಕ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಂಘಗಳ ಯಾವುದೇ ವರ್ಗದ ಸಂದರ್ಭದಲ್ಲಿ,–

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತ ಸಂಘವು ಅಥವಾ ಅದರ ಪರವಾಗಿ ಒಬ್ಬ ಅಧಿಕಾರಿಯು ಅಥವಾ ಸದಸ್ಯನು ಬರೆದುಕೊಟ್ಟ ಮತ್ತು ಅಂಥ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟ ಲಿಖಿತಗಳ ಮೇಲೆ ಅಥವಾ ಅಂಥ ಲಿಖಿತಗಳ ಯಾವುದೇ ವರ್ಗದ ಮೇಲೆ ಅನುಕ್ರಮವಾಗಿ ವಿಧಿಸಬಹುದಾಗಿರುವ ಸ್ಟಾಂಪ್ ಶುಲ್ಕವನ್ನು; ಮತ್ತು

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ನೋಂದಣಿ ಕಾನೂನಿನ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಫೀಜನ್ನು

– ಮಾಫೀ ಮಾಡಬಹುದು.

ಈ ಉಪಪ್ರಕರಣದಲ್ಲಿ, ವಿನಿಮಯ ಪತ್ರಗಳು, ಚೆಕ್‌ಗಳು, ಪ್ರಾಮಿಸರಿ ನೋಟುಗಳು, ವಹನ ಪತ್ರಗಳು, ಖಾತರಿ ಪತ್ರಗಳು, ವಿಮಾ ಪಾಲಿಸಿಗಳು, ಷೇರುಗಳು, ಡಿಬೆಂಚರುಗಳ ವರ್ಗಾವಣೆ, ಪ್ರತಿನಿಧಿ ಪತ್ರಗಳು ಮತ್ತು ರಸೀತಿಗಳು – ಇವುಗಳ ವಿಷಯದಲ್ಲಿ ಸ್ಟಾಂಪ್ ಶುಲ್ಕಕ್ಕೆ ಸಂಬಂಧಿಸಿದಂತೆ ಮತ್ತು ಸಂವಿಧಾನದ ಏಳನೇ ಅನುಸೂಚಿಯಲ್ಲಿನ ಪಟ್ಟಿ 1 ರಲ್ಲಿನ ನಮೂದು ಸಂಖ್ಯೆ 96 ರಲ್ಲಿ ಬರುವ ಯಾವುದೇ ಸ್ಟಾಂಪ್ ಶುಲ್ಕಕ್ಕೆ ಸಂಬಂಧಿಸಿದಂತೆ "ಸರ್ಕಾರ" ಎಂದರೆ ಕೇಂದ್ರ ಸರ್ಕಾರ ಮತ್ತು ಮೇಲೆ ಹೇಳಿರುವುದರ ಹೊರತು ಇತರ ಸಂದರ್ಭಗಳಲ್ಲಿ "ಸರ್ಕಾರ" ಎಂದರೆ ರಾಜ್ಯ ಸರ್ಕಾರ.

## ನೋಂದಾಯಿತ ಸಂಘಗಳ ಸ್ವತ್ತು ಮತ್ತು ನಿಧಿಗಳು

**29. ಸಾಲಗಳ ಮೇಲೆ ನಿರ್ಬಂಧ.–** (1) ಒಂದು ನೋಂದಾಯಿತ ಸಂಘವು ಸದಸ್ಯನಲ್ಲದ ಇತರ ಯಾವನೇ ವ್ಯಕ್ತಿಗೆ ಸಾಲವನ್ನು ನೀಡತಕ್ಕದ್ದಲ್ಲ:

ಪರಂತು, ರಿಜಿಸ್ಟ್ರಾರನ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿಯನ್ನು ಪಡೆದು ಒಂದು ನೋಂದಾಯಿತ ಸಂಘವು ಇನ್ನೊಂದು ನೋಂದಾಯಿತ ಸಂಘಕ್ಕೆ ಸಾಲಗಳನ್ನು ನೀಡಬಹುದು.

(2) ರಿಜಿಸ್ಟ್ರಾರನ ಮಂಜೂರಾತಿ ಇದ್ದ ಹೊರತು, ಅಪರಿಮಿತ ಹೊಣೆಗಾರಿಕೆಯುಳ್ಳ ಸಂಘವು ಚರಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲವಾಗಿ ಕೊಡತಕ್ಕದ್ದಲ್ಲ.

(3) ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾವುದೇ ನೋಂದಾಯಿತ ಸಂಘದ ಅಥವಾ ನೋಂದಾಯಿತ ಸಂಘಗಳ ಯಾವುದೇ ವರ್ಗದ ಸ್ಥಿರಸ್ವತ್ತಿನ ಅಡಮಾನದ ಮೇಲೆ ಹಣವನ್ನು ಸಾಲವಾಗಿ ಕೊಡುವುದನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

**30. ಸಾಲ ಪಡೆಯುವುದರ ಮೇಲೆ ನಿರ್ಬಂಧ.–** ಒಂದು ನೋಂದಾಯಿತ ಸಂಘವು, ನಿಯಮಗಳು ಅಥವಾ ಉಪವಿಧಿಗಳ ಮೂಲಕ ನಿಯಮಿಸಬಹುದಾದಷ್ಟು ಮಟ್ಟಿಗೆ ಮತ್ತು ಅಂಥ ಷರತ್ತುಗಳ ಮೇರೆಗೆ ಮಾತ್ರವೇ ಸದಸ್ಯರಲ್ಲದ ವ್ಯಕ್ತಿಗಳಿಂದ ಠೇವಣಿಗಳನ್ನು ಮತ್ತು ಸಾಲಗಳನ್ನು ಸ್ವೀಕರಿಸತಕ್ಕದ್ದು.

**31. ಸದಸ್ಯರಲ್ಲದವರೊಂದಿಗೆ ನಡೆಸುವ ಇತರ ವ್ಯವಹಾರಗಳ ಮೇಲೆ ನಿರ್ಬಂಧ.–** 29 ಮತ್ತು 30ನೇ ಪ್ರಕರಣಗಳಲ್ಲಿ ಉಪಬಂಧಿಸಿದಂತೆ ಹೊರತು, ಸದಸ್ಯರಲ್ಲದ ಇತರ ವ್ಯಕ್ತಿಗಳೊಂದಿಗೆ ನೋಂದಾಯಿತ ಸಂಘವು ನಡೆಸುವ ವ್ಯವಹಾರಗಳು, ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಮಿಸಬಹುದಾದಂಥ ನಿಷೇಧಗಳು ಮತ್ತು ನಿರ್ಬಂಧಗಳೇನಾದರೂ ಇದ್ದರೆ, ಅವುಗಳಿಗೆ ಒಳಪಟ್ಟಿರತಕ್ಕದ್ದು.

**32. ನಿಧಿಗಳ ಹೂಡಿಕೆ.–** (1) ನೋಂದಾಯಿತ ಸಂಘವು ತನ್ನ ನಿಧಿಯನ್ನು,–

(ಎ) ಸರಕಾರಿ ಉಳಿತಾಯ ಬ್ಯಾಂಕಿನಲ್ಲಿ; ಅಥವಾ

(ಬಿ) ಭಾರತ ನ್ಯಾಸ ಅಧಿನಿಯಮ, 1882 (1882ರ 2)ರ 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಭದ್ರತೆಗಳಲ್ಲಿ; ಅಥವಾ

(ಸಿ) ಯಾವುದೇ ಇತರ ನೋಂದಾಯಿತ ಸಂಘದ ಷೇರುಗಳಲ್ಲಿ ಅಥವಾ ಭದ್ರತೆಯ ಮೇಲೆ; ಅಥವಾ

(ಡಿ) ಯಾವುದೇ ಬ್ಯಾಂಕಿನಲ್ಲಿ ಅಥವಾ ಬ್ಯಾಂಕ್ ವ್ಯವಹಾರ ನಡೆಸುವ ಉದ್ದೇಶಕ್ಕಾಗಿ ರಿಜಿಸ್ಟ್ರಾರನಿಂದ ಅನುಮತಿ ಪಡೆದ ವ್ಯಕ್ತಿಯ ಬಳಿಯಲ್ಲಿ; ಅಥವಾ

(ಇ) ನಿಯಮಗಳು ಅನುಮತಿಸುವ ಯಾವುದೇ ಇತರ ವಿಧಾನದಲ್ಲಿ

– ಹೂಡಬಹುದು ಅಥವಾ ಠೇವಣಿ ಇಡಬಹುದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವ ಹೂಡಿಕೆಗಳು ಅಥವಾ ಠೇವಣಿಗಳು ಈ ಅಧಿನಿಯಮವು ಆಗ ಜಾರಿಯಲ್ಲಿ ಇಲ್ಲದಿದ್ದರೆ ಮಾನ್ಯವಾಗಬಹುದಾಗಿದ್ದವೋ ಆ ಹೂಡಿಕೆಗಳು ಮತ್ತು ಠೇವಣಿಗಳನ್ನು ಅನುಸಮರ್ಥಿಸಲಾಗಿದೆ ಮತ್ತು ಸ್ಥಿರೀಕರಿಸಲಾಗಿದೆ.

**33. ನಿಧಿಗಳನ್ನು ಲಾಭದ ರೂಪದಲ್ಲಿ ವಿಭಜಿಸದಿರುವುದು.–** ನೋಂದಾಯಿತ ಸಂಘದ ನಿಧಿಗಳ ಯಾವುದೇ ಭಾಗವನ್ನು ಅದರ ಸದಸ್ಯರಲ್ಲಿ ಬೋನಸ್ಸು ಅಥವಾ ಲಾಭಾಂಶ ಅಥವಾ ಅನ್ಯಥಾ ರೂಪದಲ್ಲಿ ವಿಭಜಿಸತಕ್ಕದ್ದಲ್ಲ:

ಪರಂತು, ಯಾವುದೇ ವರ್ಷದಲ್ಲಿ ನಿವ್ವಳ ಲಾಭಗಳ ಕನಿಷ್ಠ ನಾಲ್ಕನೇ ಒಂದು ಭಾಗದಷ್ಟನ್ನು ಮೀಸಲು ನಿಧಿಗೆ ಸೇರಿಸಿದ ತರುವಾಯ, ಅಂಥ ಲಾಭಗಳ ಉಳಿದ ಭಾಗದಿಂದ ಮತ್ತು ಹಿಂದಿನ ವರ್ಷಗಳ ಯಾವುವೇ ಲಾಭಗಳಿಂದ ವಿತರಣೆಗಾಗಿ ಲಭ್ಯವಿರುವ ಸಂದಾಯಗಳನ್ನು, ನಿಯಮಗಳ ಅಥವಾ ಉಪವಿಧಿಗಳ ಮೂಲಕ ನಿಯಮಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ಷರತ್ತುಗಳ ಮೇರೆಗೆ ಸದಸ್ಯರಿಗೆ ವಿತರಣೆ ಮಾಡಬಹುದು:

ಮತ್ತೂ ಪರಂತು, ಅಪರಿಮಿತ ಹೊಣೆಗಾರಿಕೆಯ ಸಂಘದ ಸಂದರ್ಭದಲ್ಲಿ, ಲಾಭಗಳ ವಿತರಣೆಯನ್ನು, ಈ ಬಗ್ಗೆ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶವಿಲ್ಲದೆ ಮಾಡತಕ್ಕದ್ದಲ್ಲ.

**34. ಧರ್ಮಾರ್ಥ ಉದ್ದೇಶಕ್ಕಾಗಿ ವಂತಿಗೆ.–** ಯಾವುದೇ ನೋಂದಾಯಿತ ಸಂಘವು, ಯಾವುದೇ ವರ್ಷದಲ್ಲಿ ನಿವ್ವಳ ಲಾಭಗಳ ನಾಲ್ಕನೇ ಒಂದು ಭಾಗವನ್ನು ಮೀಸಲು ನಿಧಿಗೆ ಸೇರಿಸಿದ ತರುವಾಯ ಉಳಿದ ನಿವ್ವಳ ಲಾಭಗಳ ಶೇಕಡ ಹತ್ತಕ್ಕೆ ಮೀರದಷ್ಟು ಮೊಬಲಗನ್ನು ರಿಜಿಸ್ಟ್ರಾರನ ಮಂಜೂರಾತಿಯನ್ನು ಪಡೆದು ಧರ್ಮದತ್ತಿಗಳ ಅಧಿನಿಯಮ, 1890 (1890ರ 6)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವಂಥ ಯಾವುದೇ ಧರ್ಮಾರ್ಥ ಉದ್ದೇಶಕ್ಕಾಗಿ ವಂತಿಗೆ ನೀಡಬಹುದು.

## ವ್ಯವಹಾರಗಳ ಪರಿಶೀಲನೆ

**35. ರಿಜಿಸ್ಟ್ರಾರನು ವಿಚಾರಣೆ ನಡೆಸುವುದು.–** (1) ರಿಜಿಸ್ಟ್ರಾರನು ಸ್ವಪ್ರೇರಣೆಯಿಂದ ನೋಂದಾಯಿತ ಸಂಘದ ರಚನೆ, ಕಾರ್ಯನಿರ್ವಹಣೆ ಮತ್ತು ಹಣಕಾಸಿನ ಪರಿಸ್ಥಿತಿ – ಇವುಗಳ ಬಗ್ಗೆ ವಿಚಾರಣೆ ನಡೆಸಬಹುದು ಅಥವಾ ವಿಚಾರಣೆ ನಡೆಸುವಂತೆ ಈ ಬಗ್ಗೆ ಲಿಖಿತ ಆದೇಶದ ಮೂಲಕ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ ನಿರ್ದೇಶಿಸಬಹುದು ಮತ್ತು ಕಲೆಕ್ಟರನ ಕೋರಿಕೆಯ ಮೇಲೆ ಅಥವಾ ಸಮಿತಿಯ ಬಹುಮತದ ಅಥವಾ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದ ಸದಸ್ಯರ ಅರ್ಜಿಯ ಮೇಲೆ ಅಂಥ ವಿಚಾರಣೆಯನ್ನು ಅವನು ನಡೆಸತಕ್ಕದ್ದು ಅಥವಾ ನಡೆಸುವಂತೆ ಯಾವನೇ ವ್ಯಕ್ತಿಗೆ ಹಾಗೆ ನಿರ್ದೇಶನ ನೀಡತಕ್ಕದ್ದು.

(2) ಸಂಘದ ಎಲ್ಲ ಅಧಿಕಾರಿಗಳು ಮತ್ತು ಸದಸ್ಯರು, ಸಂಘದ ವ್ಯವಹಾರಗಳ ಸಂಬಂಧದಲ್ಲಿ ರಿಜಿಸ್ಟ್ರಾರನು ಅಥವಾ ರಿಜಿಸ್ಟ್ರಾರನು ಅಧಿಕೃತಗೊಳಿಸಿದ ವ್ಯಕ್ತಿಯು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

**36. ಋಣವಿರುವ ಸಂಘದ ಲೆಕ್ಕ ಪುಸ್ತಕಗಳ ಪರಿಶೀಲನೆ.–** (1) ರಿಜಿಸ್ಟ್ರಾರನು ನೋಂದಾಯಿತ ಸಂಘದ ಒಬ್ಬ ಸಾಲ ಕೊಟ್ಟವನ ಅರ್ಜಿಯ ಮೇಲೆ ಸಂಘದ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸತಕ್ಕದ್ದು ಅಥವಾ ಸಂಘದ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸುವಂತೆ ಈ ಬಗ್ಗೆ ಲಿಖಿತ ಆದೇಶದ ಮೂಲಕ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ ನಿರ್ದೇಶಿಸತಕ್ಕದ್ದು:

ಪರಂತು,–

(ಎ) ಅರ್ಜಿದಾರನು ಆ ಋಣವು ಆಗ ತನಗೆ ಬರಬೇಕಾದ ಮೊತ್ತವಾಗಿದೆಯೆಂದು ಮತ್ತು ಅದರ ಸಂದಾಯಕ್ಕೆ ತಾನು ತಗಾದೆ ಮಾಡಿದ್ದು, ತನಗೆ ಯುಕ್ತ ಕಾಲದಲ್ಲಿ ಸಂದಾಯವನ್ನು ಮಾಡಿಲ್ಲವೆಂದು ರಿಜಿಸ್ಟ್ರಾರನಿಗೆ ಮನದಟ್ಟು ಮಾಡಿಕೊಡಬೇಕು; ಮತ್ತು

(ಬಿ) ಅರ್ಜಿದಾರನು, ಪ್ರಸ್ತಾವಿತ ಪರಿಶೀಲನೆಯ ವೆಚ್ಚಗಳಿಗಾಗಿ ರಿಜಿಸ್ಟ್ರಾರನು ಭದ್ರತೆಯಾಗಿ ಅಗತ್ಯಪಡಿಸಬಹುದಾದಂಥ ಮೊತ್ತವನ್ನು ಅವನ ಬಳಿ ಠೇವಣಿ ಇಡಬೇಕು.

(2) ರಿಜಿಸ್ಟ್ರಾರನು ಯಾವುದೇ ಅಂಥ ಪರಿಶೀಲನೆಯ ಫಲಿತಾಂಶವನ್ನು ಸಾಲ ಕೊಟ್ಟವನಿಗೆ ತಿಳಿಸತಕ್ಕದ್ದು.

**37. ವಿಚಾರಣೆಯ ವೆಚ್ಚಗಳು.–** 35ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿರುವಲ್ಲಿ ಅಥವಾ 36ನೇ ಪ್ರಕರಣದ ಮೇರೆಗೆ ಪರಿಶೀಲನೆಯನ್ನು ಮಾಡಿರುವಲ್ಲಿ, ರಿಜಿಸ್ಟ್ರಾರನು, ತಾನು ಸರಿಯೆಂದು ಯೋಚಿಸಬಹುದಾದಂಥ ವೆಚ್ಚಗಳನ್ನು ಅಥವಾ ವೆಚ್ಚಗಳ ಭಾಗವನ್ನು ವಿಚಾರಣೆ ಅಥವಾ ತನಿಖೆಯನ್ನು ಒತ್ತಾಯಿಸಿದ ಸಂಘ, ಸದಸ್ಯರ ಅಥವಾ ಸಾಲ ಕೊಟ್ಟವನು ಮತ್ತು ಸಂಘದ ಅಧಿಕಾರಿಗಳು ಅಥವಾ ಮಾಜಿ ಅಧಿಕಾರಿಗಳು – ಇವರುಗಳಲ್ಲಿ ಹಂಚಬಹುದು.

**38. ವೆಚ್ಚಗಳ ವಸೂಲಿ.–** 37ನೇ ಪ್ರಕರಣದ ಮೇರೆಗೆ ವೆಚ್ಚಗಳ ರೂಪದಲ್ಲಿ ನಿರ್ಧರಿಸಿದ ಯಾವುದೇ ಮೊತ್ತವನ್ನು, ಯಾವ ವ್ಯಕ್ತಿಯಿಂದ ಆ ಹಣವನ್ನು ಕ್ಲೇಮು ಮಾಡಬಹುದೋ ಆ ವ್ಯಕ್ತಿಯು ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸವಾಗಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಸ್ಥಳದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ, ಅಂಥ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗಿರುವ ಅಂಥ ವ್ಯಕ್ತಿಗೆ ಸೇರಿದ ಯಾವುದೇ ಚರಸ್ವತ್ತನ್ನು ಜಪ್ತಿ ಮಾಡಿ ಮಾರಾಟ ಮಾಡುವ ಮೂಲಕ ವಸೂಲು ಮಾಡಬಹುದು.

**ಸಂಘದ ವಿಸರ್ಜನೆ**

**39. ವಿಸರ್ಜನೆ.–** (1) ರಿಜಿಸ್ಟ್ರಾರನು, 35ನೇ ಪ್ರಕರಣದ ಮೇರೆಗೆ ನಡೆಸಲಾದ ವಿಚಾರಣೆಯ ತರುವಾಯ ಅಥವಾ 36ನೇ ಪ್ರಕರಣದ ಮೇರೆಗೆ ನಡೆಸಲಾದ ಪರಿಶೀಲನೆಯ ತರುವಾಯ ಅಥವಾ ನೋಂದಾಯಿತ ಸಂಘದ ನಾಲ್ಕನೇ ಮೂರರಷ್ಟು ಸದಸ್ಯರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸಂಘವನ್ನು ವಿಸರ್ಜಿಸತಕ್ಕದ್ದು ಎಂದು ಅಭಿಪ್ರಾಯಪಟ್ಟರೆ, ಅವನು ಆ ಸಂಘದ ನೋಂದಣಿಯನ್ನು ರದ್ದುಗೊಳಿಸಬಹುದು.

(2) ಸಂಘದ ಯಾವನೇ ಸದಸ್ಯನು, (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ವಿರುದ್ಧ, ಆ ಆದೇಶವನ್ನು ಮಾಡಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಅಪೀಲು ಮಾಡಿಕೊಳ್ಳಬಹುದು.

(3) ಸಂಘದ ನೋಂದಣಿಯನ್ನು ರದ್ದುಪಡಿಸುವ ಆದೇಶವನ್ನು ಮಾಡಿದ ಎರಡು ತಿಂಗಳುಗಳೊಳಗೆ ಯಾವುದೇ ಅಪೀಲನ್ನು ಸಲ್ಲಿಸದಿರುವಲ್ಲಿ, ಆ ಆದೇಶವು ಆ ಅವಧಿಯು ಮುಕ್ತಾಯವಾದ ತರುವಾಯ ಪರಿಣಾಮಕಾರಿಯಾಗತಕ್ಕದ್ದು.

(4) ಅಪೀಲನ್ನು ಎರಡು ತಿಂಗಳುಗಳೊಳಗೆ ಸಲ್ಲಿಸಿರುವಲ್ಲಿ, ಅದನ್ನು ಅಪೀಲು ಪ್ರಾಧಿಕಾರವು ಸ್ಥಿರೀಕರಿಸುವವರೆಗೆ ಆದೇಶವು ಪರಿಣಾಮಕಾರಿಯಾಗತಕ್ಕದ್ದಲ್ಲ.

(5) ಈ ಪ್ರಕರಣದ ಮೇರೆಗೆ ಅಪೀಲು ಪ್ರಾಧಿಕಾರವು ರಾಜ್ಯ ಸರ್ಕಾರವಾಗಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೆವಿನ್ಯೂ ಪ್ರಾಧಿಕಾರಕ್ಕೆ ಅಪೀಲುಗಳನ್ನು ಸಲ್ಲಿಸಲು ಅವಕಾಶವಿರತಕ್ಕದ್ದೆಂದು ನಿರ್ದೇಶಿಸಬಹುದು.

**40. ಸಂಘದ ನೋಂದಣಿಯ ರದ್ದಿಯಾತಿ.–** ಸಂಘವು ಕನಿಷ್ಠ ಪಕ್ಷ ಹತ್ತು ಸದಸ್ಯರನ್ನು ಒಳಗೊಂಡಿರಬೇಕೆಂಬುದು ನೋಂದಣಿಯ ಷರತ್ತು ಇರುವಾಗ, ಸದಸ್ಯರ ಸಂಖ್ಯೆಯು ಹತ್ತಕ್ಕಿಂತ ಕಡಿಮೆಯಾಗಿದೆಯೆಂದು ಯಾವುದೇ ಕಾಲದಲ್ಲಿ ರಿಜಿಸ್ಟ್ರಾರನಿಗೆ ಮನವರಿಕೆಯಾದರೆ, ಅವನು ಲಿಖಿತ ಆದೇಶದ ಮೂಲಕ ಆ ಸಂಘದ ನೋಂದಣಿಯನ್ನು ರದ್ದುಮಾಡಬಹುದು.

**41. ನೋಂದಣಿಯ ರದ್ದಿಯಾತಿಯ ಪರಿಣಾಮ.–** ಸಂಘದ ನೋಂದಣಿಯು ರದ್ದಾಗಿರುವಲ್ಲಿ, ಸಂಘವು,–

(ಎ) 39ನೇ ಪ್ರಕರಣದ ಉಪಬಂಧಗಳಿಗನುಸಾರ ರದ್ದಾಗಿರುವ ಸಂದರ್ಭದಲ್ಲಿ, ರದ್ದಿಯಾತಿಯ ಆದೇಶವು ಪರಿಣಾಮಕಾರಿಯಾಗುವ ದಿನಾಂಕದಿಂದ;

(ಬಿ) 40ನೇ ಪ್ರಕರಣದ ಉಪಬಂಧಗಳಿಗನುಸಾರ ರದ್ದಾಗಿರುವ ಸಂದರ್ಭದಲ್ಲಿ, ಆ ಆದೇಶದ ದಿನಾಂಕದಿಂದ

– ನಿಗಮಿತ ನಿಕಾಯವಾಗಿರುವುದು ನಿಂತುಹೋಗತಕ್ಕದ್ದು.

**42. ಸಮಾಪನಗೊಳಿಸುವುದು.–** (1) ಒಂದು ಸಂಘದ ನೋಂದಣಿಯನ್ನು 39ನೇ ಪ್ರಕರಣದ ಅಥವಾ 40ನೇ ಪ್ರಕರಣದ ಮೇರೆಗೆ ರದ್ದುಮಾಡಿರುವಲ್ಲಿ, ರಿಜಿಸ್ಟ್ರಾರನು, ಸಕ್ಷಮ ವ್ಯಕ್ತಿಯನ್ನು ಸಂಘದ ರಿಸೀವರನನ್ನಾಗಿ ನೇಮಕ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ರಿಸೀವರನು,–

(ಎ) ತನ್ನ ಹೆಸರಿನಲ್ಲಿ ಅಥವಾ ತನ್ನ ಪದದ ಹೆಸರಿನಲ್ಲಿ ಸಂಘದ ಪರವಾಗಿ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಮತ್ತು ಪ್ರತಿವಾದಿಸುವ;

(ಬಿ) ಸಂಘದ ಆಸ್ತಿಗಳಿಗೆ ಸಂಘದ ಸದಸ್ಯರು ಮತ್ತು ಮಾಜಿ ಸದಸ್ಯರು ಕ್ರಮವಾಗಿ ಸಲ್ಲಿಸಬೇಕಾದ ವಂತಿಗೆಯನ್ನು ನಿರ್ಧರಿಸುವ;

(ಸಿ) ಸಂಘದ ವಿರುದ್ಧ ಸಲ್ಲಿಸಲಾದ ಎಲ್ಲ ಕ್ಲೇಮುಗಳನ್ನು ಪರಿಶೀಲನೆ ಮಾಡುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕ್ಲೇಮುದಾರರ ನಡುವಣ ಆದ್ಯತಾ ಕ್ರಮದ ಪ್ರಶ್ನೆಗಳನ್ನು ನಿರ್ಧರಿಸುವ;

(ಡಿ) ಸಮಾಪನೆಯ ವೆಚ್ಚಗಳನ್ನು ಯಾವ ವ್ಯಕ್ತಿಗಳು ಮತ್ತು ಯಾವ ಪ್ರಮಾಣಗಳಲ್ಲಿ ಭರಿಸಬೇಕು ಎಂಬುದನ್ನು ನಿರ್ಧರಿಸುವ; ಮತ್ತು

(ಇ) ಸಂಘದ ಆಸ್ತಿಗಳ ಸಂಗ್ರಹಣೆ ಮತ್ತು ವಿತರಣೆ ಸಂಬಂಧದಲ್ಲಿ, ಸಂಘದ ವ್ಯವಹಾರಗಳನ್ನು ಸಮಾಪನಗೊಳಿಸಲು ಅವಶ್ಯವಾಗಿದೆಯೆಂದು ಅವನಿಗೆ ಕಂಡುಬರಬಹುದಾದಂಥ ನಿರ್ದೇಶನಗಳನ್ನು ನೀಡುವ

– ಅಧಿಕಾರವನ್ನು ಹೊಂದಿರತಕ್ಕದ್ದು.

(3) ಯಾವುವೇ ನಿಯಮಗಳಿಗೊಳಪಟ್ಟು, ಈ ಪ್ರಕರಣದ ಮೇರೆಗೆ ನೇಮಕಗೊಂಡ ರಿಸೀವರನು, ಅಂಥ ಅಧಿಕಾರಗಳು ಈ ಪ್ರಕರಣದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಿರುವಷ್ಟು ಮಟ್ಟಿಗೆ, ಸಾಕ್ಷಿದಾರರನ್ನು ಸಮನು ಮಾಡುವ ಮತ್ತು ಅವರ ಹಾಜರಾತಿಯನ್ನು ಒತ್ತಾಯಪಡಿಸುವ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಪಡಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದ ಸಂದರ್ಭದಲ್ಲಿ ಉಪಬಂಧಿಸಿರುವಂತಹದೇ ವಿಧಾನದಲ್ಲಿ ಮತ್ತು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅದೇ ರೀತಿಯಲ್ಲಿ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ರಿಸೀವರನು ಮಾಡಿದ ಯಾವುದೇ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ನಿಯಮಗಳ ಮೂಲಕ ಉಪಬಂಧಿಸಿರುವಲ್ಲಿ, ಅದನ್ನು ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯಕ್ಕೆ ಸಲ್ಲಿಸಲು ಅವಕಾಶವಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮಾಡಿದ ಆದೇಶಗಳನ್ನು,-

(ಎ) ರಿಸೀವರನು ಮಾಡಿರುವಾಗ, ಸ್ಥಳೀಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾವುದೇ ಸಿವಿಲ್ ನ್ಯಾಯಾಲಯವು ಅಂಥ ನ್ಯಾಯಾಲಯದ ಡಿಕ್ರಿಯನ್ನು ಜಾರಿಗೊಳಿಸುವ ರೀತಿಯಲ್ಲಿ;

(ಬಿ) ಅಪೀಲಿನ ಮೇಲೆ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶನು ಮಾಡಿರುವಾಗ, ಆ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿರುವ ಯಾವುದೇ ದಾವೆಯಲ್ಲಿ ಮಾಡಿದ ಅಂಥ ನ್ಯಾಯಾಲಯದ ಡಿಕ್ರಿಯನ್ನು ಜಾರಿಗೊಳಿಸುವ ರೀತಿಯಲ್ಲಿ

– ಅವುಗಳನ್ನು ಆ ಸಂಬಂಧದಲ್ಲಿ ಅರ್ಜಿ ಬಂದ ಮೇಲೆ ಜಾರಿಗೊಳಿಸತಕ್ಕದ್ದು.

(6) ಇದರಲ್ಲಿ ಈ ಮುಂಚೆ ಸ್ಪಷ್ಟವಾಗಿ ಉಪಬಂಧಿಸಿರುವಷ್ಟನ್ನು ಹೊರತುಪಡಿಸಿ ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ಒಂದು ನೋಂದಾಯಿತ ಸಂಘದ ವಿಸರ್ಜನೆಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

## ನಿಯಮಗಳು

**43. ನಿಯಮಗಳು.–** (1) ರಾಜ್ಯ ಸರ್ಕಾರವು, ಇಡೀ ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಮತ್ತು ಯಾವುದೇ ನೋಂದಾಯಿತ ಸಂಘಕ್ಕಾಗಿ ಅಥವಾ ಅಂಥ ಸಂಘಗಳ ವರ್ಗಕ್ಕಾಗಿ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) 5ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಒಬ್ಬ ಸದಸ್ಯನು ಸಂಘದಲ್ಲಿ ಹೊಂದಬಹುದಾದ ಷೇರುಗಳ ಗರಿಷ್ಠ ಸಂಖ್ಯೆಯನ್ನು ಅಥವಾ ಅದರ ಬಂಡವಾಳದ ಭಾಗವನ್ನು ನಿಯಮಿಸಬಹುದು;

(ಬಿ) ಸಂಘದ ನೋಂದಣಿಗಾಗಿ ಅರ್ಜಿ ಸಲ್ಲಿಸುವಲ್ಲಿ ಉಪಯೋಗಿಸಬೇಕಾದ ನಮೂನೆಗಳನ್ನು, ಪಾಲಿಸಬೇಕಾದ ಷರತ್ತುಗಳನ್ನು ಮತ್ತು ಅಂಥ ಅರ್ಜಿಗಳ ವಿಷಯಕ್ಕೆ ಸಂಬಂಧಪಟ್ಟ ಪ್ರಕ್ರಿಯೆಯನ್ನು ನಿಯಮಿಸಬಹುದು;

(ಸಿ) ಸಂಘವು ಯಾವ ವಿಷಯಗಳ ಸಂಬಂಧದಲ್ಲಿ ಉಪವಿಧಿಗಳನ್ನು ರಚಿಸಬಹುದೋ ಅಥವಾ ರಚಿಸತಕ್ಕದ್ದೋ ಆ ವಿಷಯಗಳನ್ನು ನಿಯಮಿಸಬಹುದು ಮತ್ತು ಉಪವಿಧಿಗಳನ್ನು ರಚಿಸುವಲ್ಲಿ, ವ್ಯತ್ಯಾಸಗೊಳಿಸುವಲ್ಲಿ ಮತ್ತು ರದ್ದುಗೊಳಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಹಾಗೂ ಅಂಥ ರಚನೆ, ವ್ಯತ್ಯಾಸ ಅಥವಾ ರದ್ದಿಯಾತಿಗೆ ಮುಂಚೆ ಮನದಟ್ಟು ಮಾಡಿಕೊಳ್ಳಬೇಕಾದ ಷರತ್ತುಗಳನ್ನು ನಿಯಮಿಸಬಹುದು;

(ಡಿ) ಸದಸ್ಯರಾಗಿ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುವ ಅಥವಾ ಸದಸ್ಯರಾಗಿ ಪ್ರವೇಶ ಪಡೆದಿರುವ ವ್ಯಕ್ತಿಗಳು ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು ಮತ್ತು ಸದಸ್ಯರ ಚುನಾವಣೆ ಮತ್ತು ಪ್ರವೇಶ, ಹಾಗೂ ಸದಸ್ಯತ್ವದ ಹಕ್ಕನ್ನು ಚಲಾಯಿಸುವುದಕ್ಕೆ ಮುಂಚೆ ಮಾಡಬೇಕಾದ ಸಂದಾಯ ಮತ್ತು ಆರ್ಜಿಸಬೇಕಾದ ಹಿತಾಸಕ್ತಿ – ಇವುಗಳ ಬಗ್ಗೆ ಏರ್ಪಾಡು ಮಾಡಬಹುದು;

(ಇ) ಷೇರುಗಳ ಅಥವಾ ಡಿಬೆಂಚರುಗಳ ಮೂಲಕ ಅನ್ಯಥಾ ನಿಧಿಗಳನ್ನು ಎತ್ತಬಹುದಾದ ರೀತಿಯನ್ನು ವಿನಿಯಮಿಸಬಹುದು;

(ಎಫ್) ಸದಸ್ಯರ ಸಾಮಾನ್ಯ ಸಭೆಗಳು ಮತ್ತು ಅಂಥ ಸಭೆಗಳಲ್ಲಿನ ಪ್ರಕ್ರಿಯೆಗಳು ಮತ್ತು ಅಂಥ ಸಭೆಗಳ ಮೂಲಕ ಚಲಾಯಿಸಬೇಕಾದ ಅಧಿಕಾರಗಳು – ಇವುಗಳ ಬಗ್ಗೆ ಏರ್ಪಾಡು ಮಾಡಬಹುದು;

(ಜಿ) ಸಮಿತಿಯ ಸದಸ್ಯರು ಮತ್ತು ಇತರ ಅಧಿಕಾರಿಗಳನ್ನು ನೇಮಕ ಮಾಡುವುದು, ಅಮಾನತುಗೊಳಿಸುವುದು ಮತ್ತು ತೆಗೆದುಹಾಕುವುದು ಮತ್ತು ಸಮಿತಿಯ ಸಭೆಗಳಲ್ಲಿನ ಪ್ರಕ್ರಿಯೆ ಮತ್ತು ಸಮಿತಿ ಮತ್ತು ಇತರ ಅಧಿಕಾರಿಗಳು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳು – ಇವುಗಳ ಬಗ್ಗೆ ಏರ್ಪಾಡು ಮಾಡಬಹುದು.

(ಎಚ್) ಸಂಘವು ಇಡಬೇಕಾದ ಲೆಕ್ಕಪತ್ರಗಳು ಮತ್ತು ಲೆಕ್ಕ ಪುಸ್ತಕಗಳನ್ನು ನಿಯಮಿಸಬಹುದು ಮತ್ತು ಅಂಥ ಲೆಕ್ಕಪತ್ರಗಳ ಪರಿಶೋಧನೆ ಮತ್ತು ಅಂಥ ಲೆಕ್ಕಪರಿಶೋಧನೆಗಾಗಿ ಮಾಡಬೇಕಾದ ವೆಚ್ಚಗಳು ಏನಾದರೂ ಇದ್ದರೆ ಆ ವೆಚ್ಚಗಳು ಮತ್ತು ಸಂಘದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೋರಿಸುವ ಜಮಾ ಖರ್ಚುಪಟ್ಟಿಯ ನಿಯತಕಾಲಿಕ ಪ್ರಕಟಣೆ – ಇವುಗಳ ಬಗ್ಗೆ ಏರ್ಪಾಡು ಮಾಡಬಹುದು;

(ಐ) ಸಂಘವು ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿವರ ಪಟ್ಟಿಕೆಗಳನ್ನು ನಿಯಮಿಸಬಹುದು ಮತ್ತು ಅಂಥ ವಿವರ ಪಟ್ಟಿಕೆಗಳನ್ನು ಯಾವ ವ್ಯಕ್ತಿಗಳು ಮತ್ತು ಯಾವ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಎಂಬ ಬಗ್ಗೆ ಏರ್ಪಾಟು ಮಾಡಬಹುದು;

(ಜೆ) ಸಂಘಗಳ ಪುಸ್ತಕಗಳಲ್ಲಿನ ನಮೂದುಗಳ ಪ್ರತಿಗಳನ್ನು ಯಾವ ವ್ಯಕ್ತಿಗಳು ಮತ್ತು ಯಾವ ನಮೂನೆಯಲ್ಲಿ ಪ್ರಮಾಣೀಕರಿಸಬಹುದೆಂಬ ಬಗ್ಗೆ ಏರ್ಪಾಡು ಮಾಡಬಹುದು;

(ಕೆ) ಸದಸ್ಯರ ರಿಜಿಸ್ಟರ್ ಮತ್ತು ಸದಸ್ಯರ ಹೊಣೆಗಾರಿಕೆಯು ಷೇರುಗಳಿಂದ ಪರಿಮಿತವಾಗಿರುವಲ್ಲಿ, ಷೇರುಗಳ ರಿಜಿಸ್ಟರ್ – ಇವುಗಳ ತಯಾರಿಕೆ ಮತ್ತು ನಿರ್ವಹಣೆಯ ಬಗ್ಗೆ ಏರ್ಪಾಡು ಮಾಡಬಹುದು;

(ಎಲ್) ಸಂಘದ ಸದಸ್ಯರ ಅಥವಾ ಮಾಜಿ ಸದಸ್ಯರ ಅಥವಾ ಸದಸ್ಯರ ಅಥವಾ ಮಾಜಿ ಸದಸ್ಯರ ಮುಖಾಂತರ ಕ್ಲೇಮು ಮಾಡುವ ವ್ಯಕ್ತಿಗಳ ನಡುವೆ ಅಥವಾ ಸದಸ್ಯ ಅಥವಾ ಮಾಜಿ ಸದಸ್ಯ ಅಥವಾ ಹಾಗೆ ಕ್ಲೇಮು ಮಾಡುವ ವ್ಯಕ್ತಿಗಳ ಮತ್ತು ಸಮಿತಿ ಅಥವಾ ಯಾವನೇ ಅಧಿಕಾರಿಯ ನಡುವೆ ಸಂಘದ ವ್ಯವಹಾರಕ್ಕೆ ಸಂಬಂಧಿಸುವ ಯಾವುದೇ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಅಥವಾ ರಿಜಿಸ್ಟ್ರಾರನು ಮಧ್ಯಸ್ಥಗಾರಿಕೆಗೆ ಒಪ್ಪಿಸತಕ್ಕದ್ದೆಂದು ನಿರ್ದೇಶಿಸಿದರೆ, ಮಧ್ಯಸ್ಥಗಾರಿಕೆಗೆ ಒಪ್ಪಿಸತಕ್ಕದ್ದೆಂದು ಉಪಬಂಧಿಸಬಹುದು ಮತ್ತು ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರನ್ನು ನೇಮಕ ಮಾಡುವ ವಿಧಾನವನ್ನು ಮತ್ತು ರಿಜಿಸ್ಟ್ರಾರ್ ಅಥವಾ ಅಂಥ ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರ ಮುಂದಿನ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ರಿಜಿಸ್ಟ್ರಾರನ ತೀರ್ಮಾನಗಳ ಅಥವಾ ಮಧ್ಯಸ್ಥಗಾರರ ಐತೀರ್ಪುಗಳ ಜಾರಿಯನ್ನು ನಿಯಮಿಸಬಹುದು;

(ಎಂ) ಸದಸ್ಯರು ತಮ್ಮ ಸದಸ್ಯತ್ವವನ್ನು ಹಿಂತೆಗೆದುಕೊಳ್ಳುವುದು ಮತ್ತು ಸದಸ್ಯರನ್ನು ಹೊರಹಾಕುವುದು ಮತ್ತು ಸದಸ್ಯತ್ವವನ್ನು ಹಿಂತೆಗೆದುಕೊಂಡ ಅಥವಾ ಹೊರಹಾಕಲಾಗಿರುವ ಸದಸ್ಯರಿಗೆ ನೀಡಬೇಕಾದ ಸಂದಾಯಗಳು ಏನಾದರೂ ಇದ್ದರೆ ಆ ಸಂದಾಯಗಳ ಬಗ್ಗೆ ಮತ್ತು ಮಾಜಿ ಸದಸ್ಯರ ಹೊಣೆಗಾರಿಕೆಗಳ ಬಗ್ಗೆ ಏರ್ಪಾಡು ಮಾಡಬಹುದು;

(ಎನ್) ಮೃತ ಸದಸ್ಯನ ಹಿತಾಸಕ್ತಿಯ ಮೌಲ್ಯವನ್ನು ನಿರ್ಧರಿಸತಕ್ಕ ವಿಧಾನಕ್ಕೆ ಮತ್ತು ಅಂಥ ಹಿತಾಸಕ್ತಿಯನ್ನು ಯಾವ ವ್ಯಕ್ತಿಗೆ ಸಂದಾಯ ಅಥವಾ ವರ್ಗಾವಣೆ ಮಾಡಬಹುದಾಗಿದೆಯೋ ಆ ವ್ಯಕ್ತಿಯ ನಾಮನಿರ್ದೇಶನಕ್ಕೆ ಏರ್ಪಾಡು ಮಾಡಬಹುದು;

(ಒ) ಸಾಲಗಳಿಗೆ ಅರ್ಜಿ ಹಾಕಿಕೊಳ್ಳುವ ಸದಸ್ಯರು ಮಾಡಬೇಕಾದ ಸಂದಾಯಗಳನ್ನು ಮತ್ತು ಪಾಲಿಸಬೇಕಾದ ಷರತ್ತುಗಳನ್ನು ಮತ್ತು ಒಬ್ಬ ಸದಸ್ಯನಿಗೆ ಯಾವ ಅವಧಿಗೆ ಸಾಲಗಳನ್ನು ನೀಡಬಹುದೋ ಆ ಅವಧಿಯನ್ನು ಮತ್ತು ಎಷ್ಟು ಮೊಬಲಗನ್ನು ಸಾಲವಾಗಿ ನೀಡಬಹುದೋ ಆ ಮೊಬಲಗನ್ನು ನಿಯಮಿಸಬಹುದು;

(ಪಿ) ಮೀಸಲು ನಿಧಿಗಳ ರಚನೆ ಮತ್ತು ನಿರ್ವಹಣೆ ಮತ್ತು ಅಂಥ ನಿಧಿಗಳನ್ನು ಯಾವ ಉದ್ದೇಶಗಳಿಗಾಗಿ ಉಪಯೋಗಿಸಬಹುದೋ ಆ ಉದ್ದೇಶಗಳು ಮತ್ತು ಸಂಘದ ನಿಯಂತ್ರಣದಲ್ಲಿರುವ ಯಾವುವೇ ನಿಧಿಗಳ ಹೂಡಿಕೆ – ಇವುಗಳ ಬಗ್ಗೆ ಏರ್ಪಾಡು ಮಾಡಬಹುದು;

(ಕ್ಯೂ) ಸಂಘವು ತನ್ನ ಸದಸ್ಯರ ಸಂಖ್ಯೆಯನ್ನು ಯಾವ ವ್ಯಾಪ್ತಿಯವರೆಗೆ ಪರಿಮಿತಗೊಳಿಸಬಹುದೋ ಆ ವ್ಯಾಪ್ತಿಯನ್ನು ನಿಯಮಿಸಬಹುದು;

(ಆರ್) ಅಪರಿಮಿತ ಹೊಣೆಗಾರಿಕೆಯುಳ್ಳ ಸಂಘದ ಸದಸ್ಯರಿಗೆ ಲಾಭಾಂಶಗಳನ್ನು ವಿತರಿಸಬಹುದಾದ ಷರತ್ತುಗಳನ್ನು ಮತ್ತು ಸಂಘಗಳು ಸಂದಾಯ ಮಾಡಬಹುದಾದ ಲಾಭಾಂಶದ ಗರಿಷ್ಠ ದರವನ್ನು ನಿಯಮಿಸಬಹುದು;

(ಎಸ್) 39ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಯಾವ ಸಂದರ್ಭಗಳಲ್ಲಿ ರಿಜಿಸ್ಟ್ರಾರನ ಆದೇಶಗಳ ವಿರುದ್ಧ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದೋ ಆ ಸಂದರ್ಭಗಳನ್ನು ನಿರ್ಧರಿಸಬಹುದು ಮತ್ತು ಅಂಥ ಅಪೀಲುಗಳನ್ನು ಸಲ್ಲಿಸುವಲ್ಲಿ ಮತ್ತು ವಿಲೆ ಮಾಡುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು ನಿಯಮಿಸಬಹುದು; ಮತ್ತು

(ಟ) 42ನೇ ಪ್ರಕರಣದ ಮೇರೆಗೆ ನೇಮಕಗೊಂಡ ರಿಸೀವರನು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ಅಂಥ ರಿಸೀವರನ ಆದೇಶದ ವಿರುದ್ಧ ಯಾವ ಸಂದರ್ಭಗಳಲ್ಲಿ ಅಪೀಲನ್ನು ಸಲ್ಲಿಸಲು ಅವಕಾಶವಿರತಕ್ಕದ್ದೋ ಆ ಸಂದರ್ಭಗಳನ್ನು ನಿಯಮಿಸಬಹುದು.

(3) ರಾಜ್ಯ ಸರ್ಕಾರವು ಯುಕ್ತವೆಂದು ಯೋಚಿಸುವಂಥ ಷರತ್ತುಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು, ಈ ಪ್ರಕರಣದ ಮೇರೆಗೆ, ನಿಯಮಗಳನ್ನು ರಚಿಸುವುದಕ್ಕೆ ತನ್ನ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜನೆಯ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

(4) ಈ ಪ್ರಕರಣದ ಮೂಲಕ ಪ್ರದತ್ತವಾದ ನಿಯಮ ರಚನಾಧಿಕಾರವು, ನಿಯಮಗಳು ಪೂರ್ವ ಪ್ರಕಟಣೆಯ ತರುವಾಯ ರಚಿತವಾಗತಕ್ಕದ್ದೆಂಬ ಷರತ್ತುಗಳಿಗೊಳಪಟ್ಟಿರುತ್ತದೆ.

(5) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅಂಥ ಪ್ರಕಟಣೆಯ ತರುವಾಯ ಆ ನಿಯಮಗಳು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕದ್ದು.

(6) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು.

**ಸಂಕೀರ್ಣ**

**44. ಸರ್ಕಾರಕ್ಕೆ ಬರಬೇಕಾದ ಮೊತ್ತಗಳ ವಸೂಲಿ.–** (1) ಸರ್ಕಾರಕ್ಕೆ, ನೋಂದಾಯಿತ ಸಂಘದಿಂದ ಅಥವಾ ಅಂಥ ನೋಂದಾಯಿತ ಸಂಘದ ಒಬ್ಬ ಅಧಿಕಾರಿಯಿಂದ ಅಥವಾ ಸದಸ್ಯನಿಂದ ಅಥವಾ ಮಾಜಿ ಸದಸ್ಯನಿಂದ ಬರಬೇಕಾದ ಎಲ್ಲ ಮೊತ್ತಗಳನ್ನು 37ನೇ ಪ್ರಕರಣದ ಮೇರೆಗೆ ಸರ್ಕಾರಕ್ಕೆ ಕೊಟ್ಟ ಯಾವುವೇ ವೆಚ್ಚಗಳೂ ಸೇರಿದಂತೆ ಭೂಕಂದಾಯದ ಬಾಕಿಗಳ ರೀತಿಯಲ್ಲಿ ವಸೂಲು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸರ್ಕಾರಕ್ಕೆ ನೋಂದಾಯಿತ ಸಂಘದಿಂದ ಬರಬೇಕಾದ ಮತ್ತು ವಸೂಲು ಮಾಡಬಹುದಾದ ಮೊತ್ತಗಳನ್ನು ಮೊದಲನೆಯದಾಗಿ ಸಂಘದ ಸ್ವತ್ತಿನಿಂದ, ಎರಡನೆಯದಾಗಿ, ಯಾವ ಸಂಘದ ಸದಸ್ಯರ ಹೊಣೆಗಾರಿಕೆಯು ಪರಿಮಿತವಾಗಿದೆಯೋ ಆ ಸಂಘದ ಸಂದರ್ಭದಲ್ಲಿ ಆ ಸದಸ್ಯರ ಹೊಣೆಗಾರಿಕೆಯ ಪರಿಮಿತಿಗೊಳಪಟ್ಟು ಅವರಿಂದ; ಮತ್ತು ಮೂರನೆಯದಾಗಿ, ಇತರ ಸಂಘಗಳ ಸಂದರ್ಭದಲ್ಲಿ ಸದಸ್ಯರಿಂದ ವಸೂಲಿ ಮಾಡಬಹುದು.

**45. ನೋಂದಣಿ ಷರತ್ತುಗಳಿಂದ ಸಂಘಗಳಿಗೆ ವಿನಾಯಿತಿ ನೀಡುವ ಅಧಿಕಾರ.–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು, ಪ್ರತಿಯೊಂದು ಸಂದರ್ಭದಲ್ಲಿ ವಿಶೇಷ ಆದೇಶದ ಮೂಲಕ ಮತ್ತು ತಾನು ವಿಧಿಸಬಹುದಾದಂಥ ಷರತ್ತುಗಳೇನಾದರೂ ಇದ್ದರೆ, ಅಂಥ ಷರತ್ತುಗಳಿಗೊಳಪಟ್ಟು ನೋಂದಣಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಅಗತ್ಯತೆಗಳಿಂದ ಯಾವುದೇ ಸಂಘಕ್ಕೆ ವಿನಾಯಿತಿ ನೀಡಬಹುದು.

**46. ನೋಂದಾಯಿತ ಸಂಘಗಳಿಗೆ ಅಧಿನಿಯಮದ ಉಪಬಂಧಗಳಿಂದ ವಿನಾಯಿತಿ ನೀಡುವ ಅಧಿಕಾರ.–** ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಅಧಿನಿಯಮದ ಯಾವುದೇ ಉಪಬಂಧಗಳಿಂದ ಯಾವುದೇ ನೋಂದಾಯಿತ ಸಂಘಕ್ಕೆ ವಿನಾಯಿತಿ ನೀಡಬಹುದು ಅಥವಾ ಅಂಥ ಉಪಬಂಧಗಳು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಅಂಥ ಸಂಘಕ್ಕೆ ಅನ್ವಯಿಸತಕ್ಕದ್ದೆಂದು ನಿರ್ದೇಶಿಸಬಹುದು.

**47. "ಸಹಕಾರೀ" ಎಂಬ ಪದದ ಬಳಕೆಯ ನಿಷೇಧ.–** (1) ನೋಂದಾಯಿತ ಸಂಘದ ಹೊರತು ಯಾವನೇ ಇತರ ವ್ಯಕ್ತಿಯು, ರಾಜ್ಯ ಸರ್ಕಾರದ ಮಂಜೂರಾತಿ ಇಲ್ಲದೆ "ಸಹಕಾರೀ" ಎಂಬ ಪದವು ಇರುವ ಯಾವುದೇ ಹೆಸರು ಅಥವಾ ಶೀರ್ಷಿಕೆಯ ಅಡಿಯಲ್ಲಿ ವ್ಯಾಪಾರ ಮಾಡತಕ್ಕದ್ದಲ್ಲ ಅಥವಾ ವ್ಯವಹಾರ ನಡೆಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಯಾವುದೇ ಹೆಸರಿನ ಅಥವಾ ಶೀರ್ಷಿಕೆಯಡಿಯಲ್ಲಿ ವ್ಯಾಪಾರ ಮಾಡುತ್ತಿರುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯು ಅಥವಾ ಆ ಹೆಸರಿನ ಅಥವಾ ಶೀರ್ಷಿಕೆಯ ಹಿತಾಸಕ್ತಿಯಲ್ಲಿನ ಅವನ ಉತ್ತರಾಧಿಕಾರಿಯು ಬಳಸುತ್ತಿರುವ ಆ ಯಾವುದೇ ಹೆಸರು ಅಥವಾ ಶೀರ್ಷಿಕೆಗೆ ಅನ್ವಯಿಸತಕ್ಕದ್ದಲ್ಲ.

(2) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಪರಾಧವು ಮುಂದುವರೆದ ಸಂದರ್ಭದಲ್ಲಿ, ಆ ಅಪರಾಧವು ನಿರ್ಣಯವಾದ ತರುವಾಯ, ಅಪರಾಧವು ಮುಂದುವರೆದ ದಿವಸದಿಂದ ಪ್ರತಿ ದಿವಸಕ್ಕೆ ಐದು ರೂಪಾಯಿಗಳ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**48. ಭಾರತೀಯ ಕಂಪನಿಗಳ ಅಧಿನಿಯಮ, 1882 ಅನ್ವಯಿಸದಿರುವುದು.–** ಭಾರತೀಯ ಕಂಪನಿಗಳ ಅಧಿನಿಯಮ, 1882 (1882ರ 6)ರ ಉಪಬಂಧಗಳನ್ನು ನೋಂದಾಯಿತ ಸಂಘಗಳಿಗೆ ಅನ್ವಯಗೊಳಿಸತಕ್ಕದ್ದಲ್ಲ.

**49. ಅಸ್ತಿತ್ವದಲ್ಲಿರುವ ಸಂಘಗಳನ್ನು ಉಳಿಸುವುದು.–** ಸಹಕಾರೀ ಸಾಲ ಸಂಘಗಳ ಅಧಿನಿಯಮ, 1904 (1904ರ 10)ರ ಮೇರೆಗೆ ನೋಂದಾಯಿಸಲಾಗಿದ್ದು ಈಗ ಅಸ್ತಿತ್ವದಲ್ಲಿರುವ ಪ್ರತಿಯೊಂದು ಸಂಘವನ್ನು, ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾಗಿದೆಯೆಂಬುದಾಗಿ ಭಾವಿಸತಕ್ಕದ್ದು ಮತ್ತು ಅದರ ಉಪವಿಧಿಗಳು, ಈ ಅಧಿನಿಯಮದ ವ್ಯಕ್ತ ಉಪಬಂಧಗಳಿಗೆ ಅವು ಅಸಂಗತವಾಗಿಲ್ಲದಿರುವಷ್ಟರಮಟ್ಟಿಗೆ, ಬದಲಾವಣೆ ಅಥವಾ ರದ್ದುಗೊಳಿಸುವವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**50.** [ನಿರಸನ] ಎರಡನೆಯ ನಿರಸನ ಮತ್ತು ತಿದ್ದುಪಡಿ ಅಧಿನಿಯಮ, 1914 (1914ರ 17), ಪ್ರಕರಣ 3 ಮತ್ತು ಅನುಸೂಚಿ IIರ ಮೂಲಕ ನಿರಸನಗೊಳಿಸಲಾಗಿದೆ.

* * *